# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 33 (286) |
| 2 | ಸದಸ್ಯರ ಹೆಸರು | ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) |
| 3 | ವಿಷಯ | ರಾಜ್ಯದಲ್ಲಿನ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿರುವ ಕುರಿತು. |
| 4 | ಉತ್ತರಿಸಬೇಕಾದ ದಿನಾಂಕ | 14.09.2022 |
| 5 | ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಂದಾಯ ಗ್ರಾಮಗಳು ಎಂದರೇನು; ಗ್ರಾಮ ಮತ್ತು ಕಂದಾಯ ಗ್ರಾಮಕ್ಕಿರುವ ವ್ಯತ್ಯಾಸವೇನು; ಕಂದಾಯ ಗ್ರಾಮಗಳನ್ನಾಗಿ ಮಾಡಲು ಅನುಸರಿಸುವ ನಿಯಮ ಹಾಗೂ ಮಾನದಂಡಗಳೇನು; | ಕಂದಾಯ ಗ್ರಾಮ ಎಂದರೆ ರೆವೆನ್ಯೂ ಆಡಳಿತದ ಉದ್ದೇಶಕ್ಕಾಗಿ ಭೂದಾಖಲೆಗಳಲ್ಲಿ ಮನ್ನಣೆ ಪಡೆದು ಸರಹದ್ದುಗಳು ಇರುವ ಸ್ಥಳೀಯ ಪ್ರದೇಶ. ಕಂದಾಯ ಗ್ರಾಮಗಳಲ್ಲಿ ಬರುವ ಭೂಮಿಗಳಿಗೆ ಸಂಬಂಧಿಸಿದಂತೆ ದಾಖಲೆಗಳಾದ ಗ್ರಾಮ ನಕ್ಷೆ, ಆಕಾರ್‌ಬಂದ್, ಪಹಣಿ ಮತ್ತು ಇತರೆ ಭೂದಾಖಲೆಗಳು ಇರುತ್ತವೆ. ಕಂದಾಯ ಗ್ರಾಮಗಳಲ್ಲಿ ಜನವಸತಿ ಇರಬಹುದು ಅಥವಾ ಇಲ್ಲದಿರಬಹುದು. ಜನವಸತಿ ಇಲ್ಲದೇಯಿದ್ದರೆ ಅಂತಹ ಕಂದಾಯ ಗ್ರಾಮಗಳನ್ನು ಬೇಚರಾಗ್ ಗ್ರಾಮಗಳೆನ್ನಲಾಗುತ್ತದೆ.<br>ಕಂದಾಯ ಗ್ರಾಮದಿಂದ ಅಥವಾ ಗ್ರಾಮಠಾಣದಿಂದ ದೂರದಲ್ಲಿ ನೆಲೆಸಿರುವ ಜನವಸತಿ ಸಮುಚ್ಚಯಕ್ಕೆ ಗ್ರಾಮ ಎಂದು ಕರೆಯುತ್ತಾರೆ. ಗ್ರಾಮವು ಕಂದಾಯ ಗ್ರಾಮದ ಭಾಗವಾಗಿರುತ್ತದೆ ಹೊರತು ಸ್ವತಂತ್ರ ಅಸ್ಥಿತ್ವ ಇರುವುದಿಲ್ಲ.<br>**ಕಂದಾಯ ಗ್ರಾಮಗಳನ್ನಾಗಿ ಮಾಡಲು ಅನುಸರಿಸುತ್ತಿರುವ ನಿಯಮಗಳು:**<br>1. ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 94(ಡಿ) ಹಾಗೂ ಕರ್ನಾಟಕ ಭೂಕಂದಾಯ ನಿಯಮಗಳು 1966ರ ನಿಯಮ 108 (ಝಡ್ )<br>2. ಕರ್ನಾಟಕ ಭೂಸುಧಾರಣಾ ಕಾಯ್ದೆ 1961 ರ ಕಲಂ 38(ಎ) ಹಾಗೂ ಕರ್ನಾಟಕ ಭೂಸುಧಾರಣಾ ನಿಯಮಗಳು 1974 ರ ನಿಯಮ 9(ಸಿ)<br>3. ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ/01/ಭೂದಾಮು/2016, ಬೆಂಗಳೂರು ದಿನಾಂಕ:01-03-2016ರ<br>4. ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ/20/ಸಿಸಿಆರ್‌ವಿ/2019 ದಿನಾಂಕ:15-10-2019<br>(ಸರ್ಕಾರದ ಅಧಿಸೂಚನೆಗಳನ್ನು ಲಗತ್ತಿಸಿದೆ) |

| | | |
|---|---|---|
| | | **ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಅನುಸರಿಸುತ್ತಿರುವ ಮಾನದಂಡಗಳು :**<br>1. ಕುಟುಂಬಗಳ ಸಂಖ್ಯೆ ಸುಮಾರು 50 ಅಥವಾ ಜನಸಂಖ್ಯೆ ಸುಮಾರು 250 ಕ್ಕಿಂತ ಹೆಚ್ಚಿಗೆ ಹೊಂದಿರುವ ದಾಖಲೆ ರಹಿತ ಜನವಸತಿ ಪ್ರದೇಶಗಳು<br>2. ಗ್ರಾಮಕ್ಕಿರಬೇಕಾದ ಜಮೀನಿನ ವಿಸ್ತೀರ್ಣ ಕನಿಷ್ಠ 100 ಎಕರೆ ಅಥವಾ ಅದಕ್ಕೆ ಮೇಲ್ಪಟ್ಟು, ( ಬೆಟ್ಟಗುಡ್ಡ ಮತ್ತು ಅರಣ್ಯ ಪ್ರದೇಶಗಳಲ್ಲಿ ಸಕಾರಣ ಸಮೇತ ಸಡಿಲಿಸಬಹುದು)<br>3. ಮೂಲ ಗ್ರಾಮಠಾಣಕ್ಕೆ ಹೊಂದಿಕೊಂಡಿರಬಾರದು. (ಅಂದಾಜು 1.00 ಕಿ.ಮೀ ದೂರ) |
| ಆ) | ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳ ವ್ಯಾಪ್ತಿಯಲ್ಲಿರುವ ಒಟ್ಟು ತಾಂಡಾಗಳು ಹಾಗೂ ಕಂದಾಯ ಗ್ರಾಮಗಳು ಎಷ್ಟು; (ಕಲ್ಯಾಣ ಕರ್ನಾಟಕದ ಜಿಲ್ಲಾವಾರು ಮಾಹಿತಿ ನೀಡುವುದು) | ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಂದ ವರದಿಯನ್ವಯ ಒಟ್ಟು ತಾಂಡಾಗಳು ಹಾಗೂ ಕಂದಾಯ ಗ್ರಾಮಗಳ ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ. |

| ಕ್ರ.ಸಂ | ಜಿಲ್ಲೆ | ತಾಂಡಗಳ ಸಂಖ್ಯೆ | ಕಂದಾಯ ಗ್ರಾಮಗಳ ಸಂಖ್ಯೆ |
|---|---|---|---|
| 1 | ಬಳ್ಳಾರಿ | 6 | 299 |
| 2 | ಬೀದರ್ | 217 | 635 |
| 3 | ಕೊಪ್ಪಳ | 108 | 595 |
| 4 | ಕಲಬುರಗಿ | 483 | 926 |
| 5 | ರಾಯಚೂರು | 43 | 81 |
| 6 | ವಿಜಯನಗರ | 111 | 348 |
| 7 | ಯಾದಗಿರಿ | 93 | 509 |
| **ಒಟ್ಟು** | | **1061** | **3393** |

| | | |
|---|---|---|
| ಇ) | ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿದಾಗ ಸಿಗುವ ಸೌಲಭ್ಯ ಹಾಗೂ ಸವಲತ್ತುಗಳೇನು? | ಶತಮಾನಗಳಿಂದ ಲಂಬಾಣಿ(ಬಂಜಾರ), ಗೊಲ್ಲ, ಬೋವಿ, ನಾಯಕ, ಸೋಲಿಗ, ಕಾಡುಕುರುಬ ಮುಂತಾದ ದುರ್ಬಲ ಸಮುದಾಯಗಳು ಸಮಾಜದ ಮುಖ್ಯ ವಾಹಿನಿಗೆ ಬರದೆ ತಮ್ಮದೇ ಆದ ಜೀವನಶೈಲಿಗಳನ್ನು ರೂಢಿಸಿಕೊಂಡು ಬದುಕು ಸಾಗಿಸುತ್ತಾ ಬರುತ್ತಿರುವವರನ್ನು ಸಮಾಜದ ಮುಖ್ಯವಾಹಿನಿಗೆ ತಂದು ಅವರನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುವುದು ಮುಖ್ಯ ಉದ್ದೇಶವಾಗಿರುತ್ತದೆ.<br>ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿದಾಗ ಸಿಗುವ ಸೌಲಭ್ಯ ಹಾಗೂ ಸವಲತ್ತುಗಳು ಈ ಕೆಳಕಂಡಂತಿವೆ:<br>• ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತದೆ. |

| | | |
|---|---|---|
| | | • ತಾಂಡಾ, ನಾಯಕರ ಹಟ್ಟಿ, ವಡ್ಡರಹಟ್ಟಿ, ಗೊಲ್ಲರಹಟ್ಟಿ ಮುಂತಾದವುಗಳಿಗೆ ಸ್ವತಂತ್ರ ಅಸ್ತಿತ್ವ ನೀಡಿ ಕಾನೂನು ಸ್ಥಾನಮಾನ ನೀಡಲಾಗುವುದು.<br>• ಬಹುಮುಖ್ಯವಾಗಿ ಅಲ್ಲಿ ನಿರ್ಮಿಸಿಕೊಂಡಿರುವ ವಸತಿ, ಕೊಟ್ಟಿಗೆ, ಹಿತ್ತಲು ಇತ್ಯಾದಿಗಳಿಗೆ ಮಂಜೂರಾತಿ ಹಕ್ಕುಪತ್ರ ನೀಡಲಾಗುವುದು. |

**ಕಂಇ 14 ಪಿಎಲ್‌ಸಿ 2022**

**(ಆರ್. ಅಶೋಕ)**
**ಕಂದಾಯ ಸಚಿವರು**

ಕರ್ನಾಟಕ ಸರ್ಕಾರ

ಸಂ: ಕಂಇ 20 ಸಿಸಿಆರ್‌ವಿ 2019

ಕರ್ನಾಟಕ ಸರ್ಕಾರದ ಸಚಿವಾಲಯ
ಕಂದಾಯ ಇಲಾಖೆ
ಬಹುಮಹಡಿಗಳ ಕಟ್ಟಡ, ದಿನಾಂಕ: 15-10-2019

## ಸುತ್ತೋಲೆ

ವಿಷಯ : ದಾಖಲೆರಹಿತ ಜನವಸತಿಗಳನ್ನು ಕಂದಾಯ ಗ್ರಾಮ/ಗ್ರಾಮದ ಭಾಗವಾಗಿ ಪರಿವರ್ತಿಸಿ ಅಲ್ಲಿಯ ನಿವಾಸಿಗಳಿಗೆ ವಾಸದ ಹಕ್ಕು ದಾಖಲೆಗಳನ್ನು ನೀಡುವ ಕಾರ್ಯಕ್ರಮ ಕುರಿತು.

ಓದಲಾಗಿದೆ : 1) ಸರ್ಕಾರದ ಆದೇಶ ಸಂ : ಕಂಇ 01 ಭೂದಾಪು 2016 ದಿನಾಂಕ : 01.03.2016
2) ಸರ್ಕಾರದ ಅಧಿಸೂಚನೆ ಸಂ : ಸಂವ್ಯಶಾಇ 54 ಶಾಸನ 2017 ದಿ : 28.10.2017
3) ಸರ್ಕಾರದ ಅಧಿಸೂಚನೆ ಸಂ : ಸಂವ್ಯಶಾಇ 54 ಶಾಸನ 2017 ದಿ : 16.12.2017
4) ಸರ್ಕಾರದ ಅಧಿಸೂಚನೆ ಸಂ : ಆರ್‌ಡಿ 92 ಎಲ್‌ಪಿಜಿ 2017 ದಿ : 17.03.2018
5) ಸರ್ಕಾರದ ಅಧಿಸೂಚನೆ ಸಂ : ಆರ್‌ಡಿ 260 ಎಲ್‌ಆರ್‌ಎ 2017 ದಿ : 11.01.2018

*****

ರಾಜ್ಯದಲ್ಲಿ ನೆಲೆಗೊಂಡಿರುವ ಜನವಸತಿಗಳ ಪೈಕಿ ಹಲವಾರು ಜನವಸತಿಗಳು ವಿಶೇಷವಾಗಿ ಲಂಬಾಣಿ ತಾಂಡ, ಗೊಲ್ಲರಹಟ್ಟಿ, ವಡ್ಡರಹಟ್ಟಿ, ನಾಯಕರ ಹಟ್ಟಿ, ಕುರುಬರಹಟ್ಟಿ, ಹಾಡಿ, ಮಜರೆ, ದೊಡ್ಡಿ, ಪಾಳ್ಯ ಕ್ಯಾಂಪ್. ಕಾಲೋನಿ ಇತ್ಯಾದಿ., ಹೆಸರುಗಳಿಂದ ಗುರುತಿಸಲ್ಪಡುವ ಜನವಸತಿಗಳು ದಾಖಲೆರಹಿತವಾಗಿಯೇ ಉಳಿದುಕೊಂಡಿರುತ್ತವೆ. ಇಂತಹ ಜನವಸತಿಗಳನ್ನು, ಕಂದಾಯ ಗ್ರಾಮಗಳಾಗಿ ಅಥವಾ ಅಸ್ತಿತ್ವದಲ್ಲಿರುವ ಕಂದಾಯ ಗ್ರಾಮದ ಭಾಗವಾಗಿ ಪರಿವರ್ತಿಸಿ ಅಲ್ಲಿಯ ನಿವಾಸಿಗಳಿಗೆ ವಾಸ್ತವ್ಯದ ಹಕ್ಕು ದಾಖಲೆಗಳನ್ನು ಒದಗಿಸುವ ಉದ್ದೇಶದಿಂದ ಉಲ್ಲೇಖ (1) ರಂತೆ ಆದೇಶವನ್ನು ಹೊರಡಿಸಲಾಗಿರುತ್ತದೆ. ಸದರಿ ಆದೇಶದ ಭಾಗವಾಗಿ ರೂಪಿಸಲಾದ ಅನುಬಂಧದ ಮಾರ್ಗಸೂಚಿಯಲ್ಲಿ ಇಂತಹ ಜನವಸತಿಗಳನ್ನು ಕಂದಾಯ ಗ್ರಾಮವಾಗಿ ಪರಿವರ್ತಿಸುವ ವಿಧಾನ, ಪರಿವರ್ತಿತ ಗ್ರಾಮ/ ಗ್ರಾಮದ ಭಾಗದ ನಿವಾಸಿಗಳಿಗೆ ಹಕ್ಕು ದಾಖಲೆಗಳನ್ನು ಒದಗಿಸುವ ಬಗೆ ಮತ್ತು ಪರಿವರ್ತನೆಗೊಂಡ ನಂತರ ಕೈಗೊಳ್ಳಬೇಕಾದ ಕೆಲಸ ಕಾರ್ಯಗಳ ಕುರಿತು ವಿವರಿಸಲಾಗಿದೆ.

ಈ ಯೋಜನೆಯ ಪ್ರಮುಖ ಮತ್ತು ಅಂತಿಮ ಉದ್ದೇಶವು ದಾಖಲೆರಹಿತ ಜನವಸತಿಗಳಿಗೆ ಕಾನೂನಿನ ಮಾನ್ಯತೆ ನೀಡಿ ಅಲ್ಲಿ ವಾಸವಿರುವ ಕುಟುಂಬಗಳಿಗೆ ಅವರ ವಾಸದ ಮನೆ ಮತ್ತು ವಾಸಕ್ಕಾಗಿ ಬಳಕೆಯಾಗುತ್ತಿರುವ ಇತರೆ ಜಾಗಗಳಿಗೆ ಹಕ್ಕು ದಾಖಲೆಗಳನ್ನು ಒದಗಿಸಿಕೊಡುವುದಾಗಿದೆ. ಇದಕ್ಕಾಗಿ ಸರ್ಕಾರವು ಕರ್ನಾಟಕ ಭೂ ಸುಧಾರಣಾ ಕಾಯ್ದೆ ಮತ್ತು ಭೂ ಕಂದಾಯ ಕಾಯ್ದೆಗಳಿಗೆ ತಿದ್ದುಪಡಿಗಳನ್ನು ತಂದು ಉಲ್ಲೇಖ (2) ಮತ್ತು (3) ರ ಅಧಿಸೂಚನೆಗಳ ಮೂಲಕ ಅಂತಹ ಜನವಸತಿಗಳ ನಿವಾಸಿಗಳಿಗೆ ಹಕ್ಕು ದಾಖಲೆಗಳನ್ನು ನೀಡಲು ಅವಕಾಶ ಕಲ್ಪಿಸಿದೆ. ಇದರ ಅನುಷ್ಠಾನಕ್ಕಾಗಿ ಉಲ್ಲೇಖ (4) ಮತ್ತು (5) ರ ಅಧಿಸೂಚನೆಗಳಲ್ಲಿ ನಿಯಮಗಳನ್ನು ರಚಿಸಲಾಗಿದೆ. ಈ ನಿಯಮಗಳಲ್ಲಿ ದಾಖಲೆರಹಿತ ಜನವಸತಿಯನ್ನು ಕಂದಾಯ ಗ್ರಾಮ/ಗ್ರಾಮದ ಭಾಗವೆಂದು ಪರಿಗಣಿಸಲು ಕನಿಷ್ಠ 10 ಮನೆಗಳ ಗ್ರಾಮಗುಚ್ಛವಿರಬೇಕೆಂದು ನಿರ್ದಿಷ್ಟಪಡಿಸಿ ಅಲ್ಲಿ ವಾಸವಿರುವ ಕುಟುಂಬಗಳಿಗೆ ವಾಸಸ್ಥಳದ ಹಕ್ಕುದಾಖಲೆಗಳನ್ನು ನೀಡುವ ಕಾರ್ಯವಿಧಾನವನ್ನು ವಿವರಿಸಲಾಗಿದೆ.

ಮೇಲಿನ ಕಾನೂನು ನಿಯಮಗಳನ್ನು ಉಲ್ಲೇಖ (1) ರ ಅಧಿಸೂಚನೆಯ ಮಾರ್ಗಸೂಚಿಯೊಂದಿಗೆ ಓದಿಕೊಂಡಾಗ,

--

10 ರಿಂದ 49 ಮನೆಗಳಿರುವ ಗ್ರಾಮಗುಚ್ಛವನ್ನು ಅಸ್ತಿತ್ವದಲ್ಲಿರುವ ಕಂದಾಯ ಗ್ರಾಮದ ಉಪಗ್ರಾಮ (ಮಜರೆ) ಆಗಿಯೂ ಹಾಗೂ 50 ಮತ್ತು ಅದಕ್ಕಿಂತ ಹೆಚ್ಚಿನ ಮನೆಗಳಿರುವ ಗ್ರಾಮಗುಚ್ಛವನ್ನು ಸ್ವತಂತ್ರ ಕಂದಾಯ ಗ್ರಾಮವೆಂದು ಪರಿವರ್ತಿಸಲು ಕ್ರಮ ಕೈಗೊಳ್ಳಬೇಕಾಗುತ್ತದೆ. ಆದರೆ ಜಿಲ್ಲಾಧಿಕಾರಿಗಳು ಈ ಮೇಲೆ ವಿವರಿಸಿದ ಕಾನೂನು ನಿಯಮಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆ. ಉಲ್ಲೇಖ (1) ರ ಆದೇಶದ ಭಾಗದಲ್ಲಿ ಸ್ವತಂತ್ರ ಕಂದಾಯ ಗ್ರಾಮವನ್ನು ರಚಿಸಲು ನಮೂದಾದ ಮಾನದಂಡಗಳನ್ನು ಪೂರೈಸುವ ದಾಖಲೆರಹಿತ ಜನವಸತಿಗಳನ್ನು ಮಾತ್ರ ಕಂದಾಯ ಗ್ರಾಮವಾಗಿ ಪರಿವರ್ತಿಸಲು ಪ್ರಸ್ತಾವನೆ ಸಲ್ಲಿಸುತ್ತಿದ್ದಾರೆ. ಇದರಿಂದ 49 ಕ್ಕಿಂತ ಕಡಿಮೆ ಮನೆಗಳಿರುವ ಹಾಗೂ ಅದಕ್ಕೂ ಹೆಚ್ಚಿನ ಮನೆಗಳಿದ್ದು, ಮೂಲ ಗ್ರಾಮದಿಂದ 1 ಕಿ.ಮೀ.. ವ್ಯಾಪ್ತಿಯ ಒಳಗೆ ಇರುವ ಜನವಸತಿಗಳು ಈ ಯೋಜನೆಯ ಪ್ರಯೋಜನದಿಂದ ವಂಚಿತವಾಗುತ್ತಿವೆ.

ಆದ್ದರಿಂದ ಉಲ್ಲೇಖ (1) ರ ಸರ್ಕಾರಿ ಆದೇಶಕ್ಕೆ ಪೂರಕವಾಗಿ ಬಂದಿರುವ ಉಲ್ಲೇಖ (2) ರಿಂದ (5) ರ ಅಧಿಸೂಚನೆ ನಿಯಮಗಳನ್ನು ಗಮನದಲ್ಲಿರಿಸಿಕೊಂಡು ಕೆಳಕಂಡಂತೆ ಸ್ಪಷ್ಟೀಕರಣವನ್ನು ನೀಡಲಾಗಿದೆ.

1. ಯಾವುದೇ ಒಂದು ದಾಖಲೆ ರಹಿತ ಜನವಸತಿಯು ಕನಿಷ್ಟ 10 ಆದರೆ 49 ಕ್ಕೆ ಮೀರದ ಮನೆಗಳಿರುವ ಅಥವಾ 49 ಕ್ಕಿಂತ ಹೆಚ್ಚಿನ ಮನೆಗಳಿದ್ದರೂ ಮೂಲ ಗ್ರಾಮದಿಂದ 1 ಕಿ.ಮೀ., ವ್ಯಾಪ್ತಿಯ ಒಳಗೆ ಇರುವ ಗ್ರಾಮಗುಚ್ಛವಾಗಿದ್ದರೆ, ಸ್ಥಳೀಯರು ಅಪೇಕ್ಷಿಸುವ ಹೆಸರಿನಲ್ಲಿ ಅದು ನೆಲೆಗೊಂಡಿರುವ ಮೂಲ ಗ್ರಾಮದ ಭಾಗ/ಬಡಾವಣೆ ಅಥವಾ ಉಪಗ್ರಾಮ ಎಂದು ಪರಿಗಣಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಮು (5) ರಂತೆ ಅಧಿಸೂಚನೆ ಹೊರಡಿಸಲು ಪ್ರಸ್ತಾವನೆ ಸಲ್ಲಿಸಬೇಕು. ಈ ಪ್ರಸ್ತಾವನೆಯಲ್ಲಿ ಸದರಿ ಜನವಸತಿಯು ನೆಲೆಗೊಂಡಿರುವ ಪೂರ್ಣ ಪ್ರದೇಶವನ್ನು ಗ್ರಾಮಠಾಣವಾಗಿ ಪರಿವರ್ತಿಸಲು ಅಗತ್ಯವಿರುವ ನಕ್ಷೆ (ಗ್ರಾಮ ನಕ್ಷೆ ಮತ್ತು ಗ್ರಾಮಠಾಣದ ನಕ್ಷೆ) ಮತ್ತು ಅದು ಆವರಿಸಿಕೊಂಡಿರುವ ಜಾಗದ ದಾಖಲೆಗಳು ಲಭ್ಯವಿರಬೇಕು. ಸ್ವತಂತ್ರ ಗ್ರಾಮಕ್ಕೆ ಇರುವಂತೆ ಇದಕ್ಕೆ ಲಗತ್ತು ಸರ್ವೆ ನಂಬರುಗಳು ಇರಬೇಕಾಗಿಲ್ಲ.

2 ಹಾಗೆಯೇ ಯಾವುದೇ ಒಂದು ದಾಖಲೆ ರಹಿತ ಜನವಸತಿಯು 50 ಮತ್ತು ಅದಕ್ಕಿಂತ ಹೆಚ್ಚಿನ ಮನೆಗಳು ಅಥವಾ 250 ಕ್ಕಿಂತ ಹೆಚ್ಚಿನ ಜನಸಂಖ್ಯೆ ಹೊಂದಿದ್ದು, ಮೂಲ ಗ್ರಾಮದಿಂದ ಸುಮಾರು 1 ಕಿ.ಮೀ. ವ್ಯಾಪ್ತಿಯ ಹೊರಗೆ ನೆಲೆಗೊಂಡಿದ್ದರೆ ಅಂತಹ ಜನವಸತಿಯನ್ನು ಸ್ವತಂತ್ರ ಕಂದಾಯ ಗ್ರಾಮವೆಂದು ಪರಿವರ್ತಿಸಲು ಅಧಿಸೂಚನೆಗಾಗಿ ಪ್ರಸ್ತಾವನೆ ಸಲ್ಲಿಸಬೇಕು. ಇಂತಹ ಜನವಸತಿಗಳಿಗೆ ಉಲ್ಲೇಖ (1) ರ ಮಾರ್ಗಸೂಚಿಯಲ್ಲಿ ತಿಳಿಸಲಾದಂತೆ ಲಗತ್ತು ಸರ್ವೆ ನಂಬರು ಜಮೀನುಗಳು ಇರಬೇಕು.

3 ದಾಖಲೆರಹಿತ ಜನವಸತಿಯು ಸರ್ಕಾರಿ ಜಮೀನಿನಲ್ಲಿ ನೆಲೆಗೊಂಡಿದ್ದರೆ ಅದನ್ನು ಕಂದಾಯ ಗ್ರಾಮ/ಗ್ರಾಮದ ಭಾಗವಾಗಿ ಪರಿವರ್ತಿಸಲು ಈ ಮೇಲೆ ತಿಳಿಸಿದ ವಿಧಾನದಲ್ಲಿ ನೇರವಾಗಿ ಪ್ರಸ್ತಾವನೆ ಸಲ್ಲಿಸಬೇಕು. ಆದರೆ ಖಾಸಗಿ ಜಮೀನುಗಳಲ್ಲಿ ನೆಲೆಗೊಂಡಿರುವ ಜನವಸತಿಗಳನ್ನು ಕಂದಾಯ ಗ್ರಾಮ/ಗ್ರಾಮದ ಭಾಗ/ಬಡಾವಣೆ/ ಉಪ ಗ್ರಾಮ (ಮಜರೆ)ಆಗಿ ಪರಿವರ್ತಿಸಲು ಪ್ರಸ್ತಾವನೆ ಸಲ್ಲಿಸುವ ಮುನ್ನ, ಜಿಲ್ಲಾಧಿಕಾರಿಗಳು ಮೊದಲಿಗೆ ಅವು ನೆಲೆಗೊಂಡಿರುವ ಜಾಗಗಳನ್ನು ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961 ರ ಕಲಂ 38-ಎ ಪ್ರಕಾರ 2-ಇ ಅಧಿಸೂಚನೆಯನ್ನು ಹೊರಡಿಸಿ ಸರ್ಕಾರದಲ್ಲಿ ನಿಹಿತಗೊಳಿಸಬೇಕು. ಹೀಗೆ 2-ಇ ಅಧಿಸೂಚನೆ ಹೊರಡಿಸುವಾಗ ಖಾಸಗಿ ಹೆಸರಿನ ಜಾಗದಲ್ಲಿ ಭೂಮಾಲೀಕರೆ ಸ್ವತಃ ಮನೆಗಳನ್ನು ನಿರ್ಮಿಸಿಕೊಂಡಿದ್ದರೆ ಅದರ ವಿಸ್ತೀರ್ಣವನ್ನು 2-ಇ ಅಧಿಸೂಚನೆಯಲ್ಲಿ ತರಬಾರದು. ಇಂತಹ ಜಾಗವು ನಿಯಮಾನುಸಾರ ಭೂ ಪರಿವರ್ತನೆ ಆಗದೇ ಇದ್ದರೆ ಅದರ

ಮಾಲೀಕರು ಮುಂದೆ ಪಂಚಾಯಿತಿಗಳಿಂದ ಇ-ಸ್ವತ್ತು/ಖಾತೆ ಪಡೆಯುವಾಗ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಮು 95(2-ಎ) ಷರತ್ತಿಗೊಳಪಟ್ಟು ಕಲಮು 96(4) ರನ್ವಯ ಪರಿವರ್ತನಾ ಶುಲ್ಕ ಪಾವತಿಸಿದ ನಂತರವೇ ಖಾತೆ ಪಡೆಯಲು ಅರ್ಹರಾಗುತ್ತಾರೆ. ಪರಂತು ಅಂತಹ ಜಾಗದಲ್ಲಿ ಸಮುದಾಯಕ್ಕೆ ಬಳಕೆಯಾಗುತ್ತಿರುವ ಜಾಗ ಅಂದರೆ ರಸ್ತೆ, ಶಾಲೆ ಇತ್ಯಾದಿಗಳೇನಾದರೂ ಒಳಗೊಂಡಿದ್ದರೆ ಅದನ್ನು ಮಾತ್ರ ಸರ್ಕಾರದಲ್ಲಿ ನಿಹಿತಗೊಳಿಸಿಕೊಳ್ಳಬೇಕು. ಇದಾದ ನಂತರ 2-ಇ ಅಧಿಸೂಚನೆಯಲ್ಲಿ ಸೇರ್ಪಡೆಗೊಂಡ ವಿಸ್ತೀರ್ಣ, ಭೂಮಾಲೀಕರ ಸ್ವಂತ ಮನೆಗಳಿರುವ ವಿಸ್ತೀರ್ಣದ ಜಾಗ, ಹಾಗೂ ಸರ್ಕಾರಿ ಒಡೆತನದ ಜಾಗಗಳನ್ನು ಸೇರಿಸಿ ಇಡೀ ಜನವಸತಿ ಪ್ರದೇಶವನ್ನು ಗ್ರಾಮಠಾಣವಾಗಿ ಪರಿಗಣಿಸಿ ಅದನ್ನು ಕಂದಾಯ ಗ್ರಾಮ/ಗ್ರಾಮದ ಭಾಗ/ಬಡಾವಣೆ ಆಗಿ ಅಧಿಸೂಚಿಸಲು ಪ್ರಸ್ತಾವನೆ ಸಲ್ಲಿಸಬೇಕು.

4 ದಾಖಲೆ ರಹಿತ ಜನವಸತಿಯು ಆವರಿಸಿದ ಪ್ರದೇಶದಲ್ಲಿ ಭಾಗಶ: ಖಾಸಗಿ, ಭಾಗಶ: ಸರ್ಕಾರಿ/ಅರಣ್ಯ ಭೂಮಿ ಇದ್ದಲ್ಲಿ, ಮೊದಲಿಗೆ ಖಾಸಗಿ ಜಮೀನಿನ ಭಾಗಕ್ಕೆ 2-ಇ ಅಧಿಸೂಚನೆ ಹೊರಡಿಸಿ ಸರ್ಕಾರದಲ್ಲಿ ನಿಹಿತಗೊಳಿಸಿಕೊಳ್ಳಬೇಕು. ನಂತರ ಆ ಜಾಗವೂ ಸೇರಿದಂತೆ ಸರ್ಕಾರಿ ಒಡೆತನದ ಪೂರ್ಣ ಪ್ರದೇಶವನ್ನು ಗ್ರಾಮಠಾಣವಾಗಿ ಪರಿಗಣಿಸಿ, ಅದನ್ನು ಕಂದಾಯ ಗ್ರಾಮ/ಗ್ರಾಮದ ಭಾಗವಾಗಿ ಪರಿವರ್ತಿಸಲು ಪ್ರಸ್ತಾವನೆ ಸಲ್ಲಿಸಬೇಕು. ಸದರಿ ಜನವಸತಿ ಆವರಿಸಿರುವ ಜಾಗದ ಭಾಗವೇನಾದರೂ ಅರಣ್ಯ ಭೂಮಿಯಾಗಿದ್ದರೆ ಆ ಭಾಗವನ್ನು ಸದ್ಯಕ್ಕೆ ಗ್ರಾಮಠಾಣದ ವ್ಯಾಪ್ತಿಗೆ ತರಕೂಡದು. ನಂತರದಲ್ಲಿ ಅದನ್ನು ಅರಣ್ಯ ಹಕ್ಕು ಕಾಯ್ದೆ 2006ರ ನಿಯಮಗಳನ್ವಯ ಪ್ರತ್ಯೇಕ ಅಧಿಸೂಚನೆಯ ಮೂಲಕ ಆ ಗ್ರಾಮಠಾಣಕ್ಕೆ ಸೇರ್ಪಡೆಗೊಳಿಸಲು ಅವಕಾಶವಿರುತ್ತದೆ.

5 ಯಾವುದೇ ಒಂದು ಜನವಸತಿಯು ಆವರಿಸಿರುವ ಭೂ ಪ್ರದೇಶದಲ್ಲಿ ಒಂದಕ್ಕಿಂತ ಹೆಚ್ಚಿನ ಗ್ರಾಮದ ಗಡಿ ಪ್ರದೇಶವು ಸೇರಿಕೊಂಡಿದ್ದರೆ ಅದನ್ನು ಕಂದಾಯ ಗ್ರಾಮವಾಗಿ ಪರಿವರ್ತಿಸಲು ಉಭಯ ಗ್ರಾಮಗಳ ಗಡಿಗಳಿಂದ ಅದಕ್ಕೆ ಲಗತ್ತಿಸಲು ಬೇಕಾದ ಜಮೀನನ್ನು ವರ್ಗಾಯಿಸಿಕೊಂಡು ಹೊಸ ಗ್ರಾಮದ ರಚನೆ ಮಾಡಬೇಕು. ಇದಕ್ಕಾಗಿ ಹೊರಡಿಸುವ ಅಧಿಸೂಚನೆಯಲ್ಲಿ ಹೊಸ ಗ್ರಾಮ ಮತ್ತು ಅದರ ರಚನೆಗೆ ಬೇಕಾದ ಜಮೀನುಗಳು ವರ್ಗಾವಣೆಗೊಂಡ ಮೂಲ ಗ್ರಾಮಗಳ ಉಳಿಕೆ ಸರ್ವೆ ನಂಬರ್, ವಿಸ್ತೀರ್ಣ ಮತ್ತು ಅದಕ್ಕೆ ಪರ್ಯಾಯವಾಗಿ ನೀಡುವ ಹೊಸ ನಂಬರ್ ವಿವರಗಳು ಶೆಡ್ಯೂಲ್‌ನಲ್ಲಿ ನಮೂದಾಗಬೇಕು. ಒಂದುವೇಳೆ ಅಂತಹ ಜನವಸತಿಯನ್ನು ಪ್ರತ್ಯೇಕ ಕಂದಾಯ ಗ್ರಾಮವೆಂದು ರಚಿಸುವ ಬದಲು ಗ್ರಾಮದ ಭಾಗ ಅಥವಾ ಮಜರೆ ಎಂದು ಪರಿವರ್ತಿಸುವುದಾದರೆ ಅದನ್ನು ಬಹುಪಾಲು ಮನೆಗಳನ್ನು ಹೊಂದಿರುವ ಗಡಿ ವ್ಯಾಪ್ತಿಯ ಕಂದಾಯ ಗ್ರಾಮದ ಭಾಗ/ಮಜರೆ ಎಂದು ಪರಿಗಣಿಸಬೇಕು ಹಾಗೂ ಅದಕ್ಕೆ ಲಗತ್ತಾದಂತೆ ಇರುವ ಪಕ್ಕದ ಗ್ರಾಮ/ಗ್ರಾಮಗಳ ಗಡಿ ವ್ಯಾಪ್ತಿಯ ಜನವಸತಿ ಭಾಗದ ಪ್ರದೇಶವನ್ನು ಒಳಪಡಿಸಿ ಗ್ರಾಮಠಾಣವನ್ನು ನಿಗದಿಪಡಿಸಬೇಕು. ಅಧಿಸೂಚನೆಯಲ್ಲಿ ಉಭಯ ಗ್ರಾಮಗಳ ಗಡಿಯಿಂದ ತೆಗೆದುಕೊಂಡ ವಿಸ್ತೀರ್ಣದ ಜಾಗವನ್ನು ಸಂಬಂಧಿತ ಗ್ರಾಮಗಳ ಸರ್ವೆ ನಂಬರ್‌ಗಳಿಂದ ಕಳೆದು ಆಯಾ ಗ್ರಾಮಗಳ ಆಕಾರ್‌ಬಂದ್ ಮತ್ತು ಗಡಿ ನಕ್ಷೆಯಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡಿಕೊಳ್ಳಬೇಕು.

6. 2-ಇ ಅಧಿಸೂಚನೆ ವ್ಯಾಪ್ತಿಗೊಳಪಡುವ ಜಾಗದಲ್ಲಿ ಮನೆ ನಿರ್ಮಿಸಿಕೊಂಡವರು ಅದನ್ನು ಹೊರಡಿಸಿದ 1 ವರ್ಷದ ಒಳಗೆ ತಮ್ಮ ವಾಸ್ತವ್ಯದ ಹಕ್ಕು ಪ್ರತಿಪಾದಿಸಬೇಕೆಂಬ ನಿಯಮವಿರುವುದರಿಂದ ಸದರಿ ಜನವಸತಿಯು ಕಂದಾಯ ಗ್ರಾಮವಾಗಿ ಪರಿವರ್ತನೆಗೊಳ್ಳಲು ಅಂತಿಮ ಅಧಿಸೂಚನೆ ಆಗುವವರೆಗೆ ಕಾಯದೇ ಅವರಿಗೆ ವಾಸ್ತವ್ಯದ ಹಕ್ಕು ದಾಖಲೆ ನೀಡಲು ಉಪ ವಿಭಾಗಾಧಿಕಾರಿಗಳು ಸಮಾನಾಂತರವಾಗಿ ನಿಯಮಾನುಸಾರ ಕ್ರಮವಹಿಸಬೇಕು.

7. ಹೀಗೆ 2-ಇ ಅಧಿಸೂಚನೆಗೊಂಡ ಖಾಸಗಿ ಜಮೀನು ಹಾಗೂ ಕಂದಾಯ ಗ್ರಾಮವಾಗಿ ಅಂತಿಮ

ಅಧಿಸೂಚನೆಯಾದ ಸರ್ಕಾರಿ ಜಮೀನುಗಳಲ್ಲಿ ನೆಲೆಗೊಂಡ ಜನವಸತಿ ನಿವಾಸಿಗಳು ತಮ್ಮ ವಾಸ್ತವ್ಯದ ಮನೆ ಮತ್ತು ಅದರ ಉಪಯುಕ್ತತೆಯ ಜಾಗಕ್ಕೆ ಉಲ್ಲೇಖ (4) ಮತ್ತು (5) ರ ನಿಯಮಗಳಿಗೆ ಅನುಗುಣವಾಗಿ ಹಕ್ಕುಪತ್ರ ಪಡೆಯಲು ಅರ್ಹರಾಗುತ್ತಾರೆ. ಅವರಿಗೆ ಹಕ್ಕು ಪತ್ರಗಳನ್ನು ನೀಡಲು ಸಕ್ಷಮ ಪ್ರಾಧಿಕಾರಕ್ಕೆ ಸಹಾಯಕವಾಗುವಂತೆ ಸ್ಥಳೀಯ ಭೂದಾಖಲೆಗಳ ಸಹಾಯಕ ನಿರ್ದೇಶಕರು ಮೇಲ್ಕಂಡ ವರ್ಗದ ಜನವಸತಿಗಳನ್ನು ಅವು ಇರುವ ಸ್ಥಿತಿಯಲ್ಲಿಯೇ ಅಗತ್ಯವಾದ ತಂತ್ರಜ್ಞಾನವನ್ನು (ಇ.ಟಿ.ಎಸ್. ಇತ್ಯಾದಿ) ಬಳಸಿ ಗ್ರಾಮ ಬಡಾವಣೆ ನಕ್ಷೆಗಳನ್ನು ರೂಪಿಸಬೇಕು. ಸದರಿ ನಕ್ಷೆಯಲ್ಲಿ ಅಲ್ಲಿಯ ನಿವಾಸಿಗಳು ವಾಸ ಮತ್ತು ವಾಸದ ಉದ್ದೇಶಕ್ಕಾಗಿ ಬಳಸುವ ಜಾಗಗಳು ಹಾಗೂ ಸಮುದಾಯ ಬಳಕೆಯಲ್ಲಿರುವ ಜಾಗಗಳನ್ನು ಗುರುತಿಸಿ ಅವುಗಳ ಅಳತೆ, ವಿಸ್ತೀರ್ಣ, ಚೆಕ್ಕುಬಂದಿ ದಾಖಲಿಸಲು ಅನುಕೂಲವಾಗುವಂತೆ ಗುರುತು ಮಾಡಿ ಹಕ್ಕು ದಾಖಲೆ ನೀಡಲು ಅಧಿಕಾರವುಳ್ಳ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಬೇಕು. ಇದನ್ನಾಧರಿಸಿ ಸಕ್ಷಮ ಪ್ರಾಧಿಕಾರಗಳು ಅಲ್ಲಿಯ ನಿವಾಸಿಗಳಿಗೆ ನಿಯಮಾನುಸಾರ ಹಕ್ಕು ಪತ್ರಗಳನ್ನು ನೀಡಲು, ಹಕ್ಕು ಪತ್ರಕ್ಕೆ ಅರ್ಹವಾಗದ ಜಾಗವನ್ನು ಸರ್ಕಾರದ ಒಡೆತನದಲ್ಲಿಯೇ ಉಳಿಸಿಕೊಳ್ಳಲು ಹಾಗೂ ಸಮುದಾಯ ಬಳಕೆ ಜಾಗಗಳನ್ನು ಸ್ಥಳೀಯ ಸಂಸ್ಥೆ/ಇಲಾಖೆ/ಟ್ರಸ್ಟ್/ನಿರ್ವಹಣಾ ಸಂಸ್ಥೆಗಳಿಗೆ ವಹಿಸಿಕೊಡಲು ಕ್ರಮ ಕೈಗೊಳ್ಳುವುದು.

15/10/2019

ಎನ್.ಮಂಜುನಾಥ್ ಪ್ರಸಾದ್
ಪ್ರಧಾನ ಕಾರ್ಯದರ್ಶಿಗಳು
ಕಂದಾಯ ಇಲಾಖೆ

<u>ಪ್ರತಿಯನ್ನು</u> :

1. ಸರ್ಕಾರದ ಮುಖ್ಯ ಕಾರ್ಯದರ್ಶಿಯವರು, ಕರ್ನಾಟಕ ಸರ್ಕಾರ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು: ಅರಣ್ಯ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್, ಸಮಾಜ ಕಲ್ಯಾಣ, ಹಿಂದುಗಳಿದ ವರ್ಗಗಳು & ಅಲ್ಪಸಂಖ್ಯಾತರ ಇಲಾಖೆಗಳು.
3. ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಗಳು
5. ಮಾನ್ಯ ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು,
7. ಆಯುಕ್ತರು, ಭೂ ಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಕೆ.ಆರ್.ಸರ್ಕಲ್, ಬೆಂಗಳೂರು.
8. ಪ್ರಾದೇಶಿಕ ಆಯುಕ್ತರು, ಬೆಂಗಳೂರು/ಮೈಸೂರು/ಬೆಳಗಾವಿ/ಕಲ್ಬುರ್ಗಿ ವಿಭಾಗ
9. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು
10. ವಿಶೇಷ ಜಿಲ್ಲಾಧಿಕಾರಿಗಳು, ಭೂಮಿ ಉಸ್ತುವಾರಿ ಕೋಶ, ಎಸ್.ಎಸ್.ಎಲ್.ಆರ್. ಬಿಲ್ಡಿಂಗ್, ಕೆ.ಆರ್.ಸರ್ಕಲ್, ಬೆಂಗಳೂರು.
11. ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯತ್.ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು
12. ಎಲ್ಲಾ ಉಪ ವಿಭಾಗಾಧಿಕಾರಿಗಳು/ತಹಶೀಲ್ದಾರರುಗಳು : ಆಯಾ ಜಿಲ್ಲಾಧಿಕಾರಿಗಳ ಮುಖಾಂತರ.
13. ಎಲ್ಲಾ ಜಿಲ್ಲೆಗಳ ಭೂ ದಾಖಲೆಗಳ ಉಪ ನಿರ್ದೇಶಕರುಗಳು ಹಾಗೂ ಭೂ ದಾಖಲೆಗಳ ಸಹಾಯಕ ನಿರ್ದೇಶಕರುಗಳಿಗೆ (ಭೂ ದಾಖಲೆಗಳ ಉಪ ನಿರ್ದೇಶಕರುಗಳ ಮುಖಾಂತರ).
14. ಎಲ್ಲಾ ತಾಲ್ಲೂಕು ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿಗಳು : ಆಯಾ ಜಿಲ್ಲೆಗಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಮುಖಾಂತರ.
15. ಶಾಖಾ ರಕ್ಷಕ ಕಡತ / ಹೆಚ್ಚುವರಿ ಪ್ರತಿಗಳು.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದಲ್ಲಿರುವ ಲಂಬಾಣಿ ತಾಂಡಾ, ಗೊಲ್ಲರಹಟ್ಟಿ, ವಡ್ಡರಹಟ್ಟಿ, ಕುರುಬರಹಟ್ಟಿ, ನಾಯಕರ ಹಟ್ಟಿ, ಮಜರೆ ಗ್ರಾಮ, ಹಾಡಿ, ದೊಡ್ಡಿ, ಪಾಳ್ಯ, ಕ್ಯಾಂಪ್ ಕಾಲೋನಿ ಮತ್ತು ಇತರೆ ದಾಖಲೆರಹಿತ ಜನವಸತಿ ಪ್ರದೇಶಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಬಗ್ಗೆ.

ಓದಲಾಗಿದೆ:-
1) ಸರ್ಕಾರದ ಸುತ್ತೋಲೆ ಸಮಸಂಖ್ಯೆ ಆರ್‌ಡಿ 16 ಎಲ್‌ಆರ್‌ಡಿ 92 ದಿನಾಂಕ 15.02.1993.
2) ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರು ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು ಇವರಿಗೆ ಬರೆದಿರುವ ಅರೆ ಸರ್ಕಾರಿ ಪತ್ರ ಸಂಖ್ಯೆ: ಆರ್‌ಡಿ 3 ಎಲ್‌ಆರ್‌ಡಿ 93(ಭಾ) ದಿನಾಂಕ 25.06.1994.
3) ನಿರ್ದೇಶಕರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ ಇವರ ಸುತ್ತೋಲೆ ಸಂಖ್ಯೆ: ತಾಂತ್ರಿಕ ಇತರೆ 25/94-95 ದಿನಾಂಕ 17.10.1994.
4) ಸರ್ಕಾರಿ ಆದೇಶ ಸಂಖ್ಯೆ: ಕಂಇ 46 ಭೂದಾಮ 2013 ದಿನಾಂಕ 20.07.2013.

******

ರಾಜ್ಯದಲ್ಲಿ ನೆಲೆಸಿರುವ ಲಂಬಾಣಿ (ಬಂಜಾರ)ಗೊಲ್ಲ, ಭೋವಿ, ನಾಯಕ, ಸೋಲಿಗ, ಕಾಡುಕುರುಬ, ಮುಂತಾದ ದುರ್ಬಲ ಸಮುದಾಯಗಳ ಜನರು ವಾಸಿಸುವ ಹಲವು ವಸತಿ ಪ್ರದೇಶಗಳು ಅರಣ್ಯ, ಬೆಟ್ಟಗುಡ್ಡಗಳ ತಪ್ಪಲು, ಖಾಸಗಿಯರ ಜಮೀನು, ಸರ್ಕಾರಿ ಗೋಮಾಳ, ಕಾವಲು ಇತ್ಯಾದಿ ಜಮೀನುಗಳಲ್ಲಿ ನಿರ್ಮಾಣಗೊಂಡು ಹಲವಾರು ವರ್ಷಗಳಿಂದ ಅಸ್ತಿತ್ವದಲ್ಲಿರುತ್ತವೆ. ಈ ಜನರು ಶತಮಾನಗಳಿಂದ ಇಂತಹ ಪ್ರದೇಶಗಳಲ್ಲಿ ಜನವಸತಿಗಳನ್ನು ಮಾಡಿಕೊಂಡು ಸಮಾಜದ ಮುಖ್ಯವಾಹಿನಿಗೆ ಬರದೆ, ತಮ್ಮದೇ ಆದ ರೀತಿ ನೀತಿ, ಜೀವನಶೈಲಿಗಳನ್ನು ರೂಢಿಸಿಕೊಂಡು ಬದುಕು ಸಾಗಿಸುತ್ತಾ ಬರುತ್ತಿದ್ದಾರೆ. ಇಂತಹ ದಾಖಲೆರಹಿತ ಜನವಸತಿ ಪ್ರದೇಶಗಳಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಹಾಗು ಅವುಗಳಿಗೆ ಕಾನೂನಿನ ಸ್ಥಾನಮಾನ ನೀಡಲು ಮತ್ತು ಅಲ್ಲಿ ನಿರ್ಮಿಸಿಕೊಂಡಿರುವ ವಸತಿ, ಕೊಟ್ಟಿಗೆ, ಹಿತ್ತಲು ಇತ್ಯಾದಿಗಳಿಗೆ ಹಕ್ಕುಪತ್ರ ನೀಡಿ ಸಮಾಜದ ಮುಖ್ಯವಾಹಿನಿಗೆ ತಂದು ಅವರನ್ನೂ ಅಭಿವೃದ್ಧಿ ಪಥದತ್ತ ಕೊಂಡೊಯ್ಯುವುದು ಅವಶ್ಯವೆಂದು ಮನಗಾಣಲಾಗಿದೆ. ಈ ದಿಶೆಯಲ್ಲಿ ಸರ್ಕಾರವು ಪ್ರಥಮವಾಗಿ ರಾಜ್ಯದಲ್ಲಿರುವ ದಾಖಲೆರಹಿತ

...2

ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಉಲ್ಲೇಖ(1)ರಲ್ಲಿ ಓದಲಾಗಿರುವ ಸರ್ಕಾರದ ಸುತ್ತೋಲೆಯಂತೆ ಕುಟುಂಬಗಳ ಸಂಖ್ಯೆ: 60, ಜನಸಂಖ್ಯೆ: 300, ಜಮೀನಿನ ವಿಸ್ತೀರ್ಣ 900 ಎಕರೆ, ಮೂಲ ಗ್ರಾಮಕ್ಕೆ ಹೊಂದಿಕೊಂಡಿರಬಾರದು ಎಂಬಿತ್ಯಾದಿ ಮಾನದಂಡಗಳನ್ನು ನಿಗದಿಪಡಿಸಿ ಅರ್ಹವಿರುವ ಎಲ್ಲಾ ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಸೂಚನೆ ನೀಡಿತ್ತು. ಹಾಗೆಯೇ ಉಲ್ಲೇಖ(2)ರ ಪತ್ರದಲ್ಲಿ ಜನಸಂಖ್ಯೆ 500 ಕ್ಕಿಂತ ಮೇಲ್ಪಟ್ಟ ಅಥವಾ ಕುಟುಂಬಗಳ ಸಂಖ್ಯೆ 100 ಕ್ಕಿಂತ ಮೇಲ್ಪಟ್ಟ ಗೊಲ್ಲರ:ನಾಯಕರ:ವಡ್ಡರಹಟ್ಟಿ, ಹ್ಯಾಮ್ಲೆಟ್‌ಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಪ್ರಸ್ತಾವನೆಗಳನ್ನು ಕಳುಹಿಸಲು ಸೂಚಿಸಲಾಗಿತ್ತು. ಉಲ್ಲೇಖ(3) ರಲ್ಲಿ ಓದಲಾದ ಸುತ್ತೋಲೆಯಲ್ಲಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ವಿವಿಧ ಹಂತಗಳಲ್ಲಿ ಇಲಾಖಾ ಸಿಬ್ಬಂದಿಗಳು ನಿರ್ವಹಿಸಬೇಕಾದ ಕೆಲಸ ಕಾರ್ಯಗಳ ಬಗ್ಗೆ ವಿವರಿಸಲಾಗಿತ್ತು.

ಈ ಪರಿವರ್ತನಾ ಕಾರ್ಯದಲ್ಲಿ ಗಣನೀಯ ಸಂಖ್ಯೆಯ ವಸತಿ ಪ್ರದೇಶಗಳು ಮೇಲ್ಕಂಡ ಸುತ್ತೋಲೆಗಳಲ್ಲಿ ನಿರ್ಧಿಷ್ಟಪಡಿಸಿದ ಮಾನದಂಡಗಳ ವ್ಯಾಪ್ತಿಗೊಳಪಡದೆ ಕೈಬಿಟ್ಟು ಹೋಗುತ್ತಿರುವುದು ಹಾಗೂ ಇದರ ಅನುಷ್ಠಾನದಲ್ಲಿ ಸಾಕಷ್ಟು ಗೊಂದಲ ಹಾಗೂ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂದಿದ್ದನ್ನು ಗಮನಿಸಲಾಯಿತು. ಇದರ ಹಿನ್ನೆಲೆಯಲ್ಲಿ ಉಲ್ಲೇಖ(4)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಗೊಲ್ಲರಹಟ್ಟಿ, ನಾಯಕರಹಟ್ಟಿ, ವಡ್ಡರಹಟ್ಟಿ, ಹ್ಯಾಮ್ಲೆಟ್ ಇತ್ಯಾದಿಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸಲು ವಿಧಿಸಲಾಗಿದ್ದ ಷರತ್ತನ್ನು ಸಡಿಲಗೊಳಿಸಿ "50 ಹಾಗೂ ಅದಕ್ಕಿಂತ ಹೆಚ್ಚಿನ ಮನೆಗಳಿರುವ ಅಥವಾ 250ಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ" ಜನವಸತಿ ಪ್ರದೇಶಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸಲು ಆದೇಶಿಸಲಾಯಿತು. ಆದರೆ ಸದರಿ ಸಡಿಲಿಕೆ ಆದೇಶವು ಲಂಬಾಣಿ ತಾಂಡಾ, ಕ್ಯಾಂಪ್, ಕಾಲೋನಿ ಮುಂತಾದ ಜನವಸತಿಗಳಿಗೂ ಅನ್ವಯವಾಗುತ್ತದೆ ಎನ್ನುವುದರ ಕುರಿತು ಸ್ಪಷ್ಟತೆ ಇರುವುದಿಲ್ಲ. ಆದ ಕಾರಣ ಈ ಯೋಜನೆಯ ಪ್ರಗತಿ ಕುಂಠಿತಗೊಳ್ಳುತ್ತಾ ಬಂದಿತು.

ಮಿಗಿಲಾಗಿ ಗಣನೀಯ ಸಂಖ್ಯೆಯಲ್ಲಿರುವ ತಾಂಡಾ, ಹಟ್ಟಿ, ಹಾಡಿಗಳು ಅರಣ್ಯ ಪ್ರದೇಶ, ಗೋಮಾಳ, ಖರಾಬು, ಖಾಸಗಿಯವರ ಜಾಗ, ಕಾವಲು ಮುಂತಾದ ಮೀಸಲು ಪ್ರದೇಶಗಳಲ್ಲಿದ್ದು, ಇವುಗಳನ್ನು ಜಾರಿಯಲ್ಲಿರುವ ಸಾಮಾನ್ಯ ಆದೇಶದ ವ್ಯಾಪ್ತಿಯಲ್ಲಿ ತಂದು ಗ್ರಾಮಗಳಾಗಿ ಪರಿವರ್ತಿಸಲು ಸಾಧ್ಯವಾಗಿರುವುದಿಲ್ಲ. ಇಂತಹ ಜನವಸತಿ ಪ್ರದೇಶಗಳನ್ನು ಸಹ ಕಂದಾಯ ಗ್ರಾಮಗಳ ವ್ಯಾಪ್ತಿಗೆ ತರದೆ ಹೋದಲ್ಲಿ ಯೋಜನೆಯ ಉದ್ದೇಶ ಈಡೇರಿದಂತಾಗುವುದಿಲ್ಲ. ಇದಕ್ಕಾಗಿ ಆಯಾ ವರ್ಗದ

ಜಮೀನುಗಳಿಗೆ ಸಂಬಂಧಪಟ್ಟ ಕಾಯ್ದೆಗಳಡಿಯಲ್ಲಿರುವ ಅವಕಾಶಗಳನ್ನು ಬಳಸಿಕೊಂಡು ಅರ್ಹವಾಗುವ ದಾಖಲೆರಹಿತ ಜನವಸತಿ ಪ್ರದೇಶಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸಲು ತೀರ್ಮಾನಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಮೇಲೆ ಓದಲಾದ ಎಲ್ಲಾ ಸುತ್ತೋಲೆ, ಅರೆ ಸರ್ಕಾರಿ ಪತ್ರ ಹಾಗೂ ಸರ್ಕಾರಿ ಆದೇಶಗಳನ್ನು ಪರಿಷ್ಕರಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಂಇ 01 ಭೂದಾಪು 2016, ಬೆಂಗಳೂರು**
**ದಿನಾಂಕ 01.03.2016**

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ ರಾಜ್ಯದಲ್ಲಿರುವ ಅರಣ್ಯ ಪ್ರದೇಶ, ಬೆಟ್ಟಗುಡ್ಡಗಳ ತಪ್ಪಲು, ಖಾಸಗಿಯವರ ಜಮೀನು, ಸರ್ಕಾರಿ ಜಮೀನು, ಖರಾಬು, ಗೋಮಾಳ, ಕಾವಲು ಇತ್ಯಾದಿ ಜಮೀನುಗಳಲ್ಲಿ ನಿರ್ಮಾಣಗೊಂಡಿರುವ ದಾಖಲೆರಹಿತ ಜನವಸತಿ ಪ್ರದೇಶಗಳಾದ ಲಂಬಾಣಿ ತಾಂಡಾ, ಗೊಲ್ಲರಹಟ್ಟಿ, ವಡ್ಡರಹಟ್ಟಿ, ಕುರುಬರ ಹಟ್ಟಿ, ಮಜರೆ ಗ್ರಾಮ, ನಾಯಕರ ಹಟ್ಟಿ, ಹಾಡಿ, ದೊಡ್ಡಿ, ಪಾಳ್ಯ, ಕ್ಯಾಂಪ್, ಕಾಲೋನಿ ಮುಂತಾದವುಗಳನ್ನು  ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಹಾಗೂ ಅಲ್ಲಿಯ ನಿವಾಸಿಗಳಿಗೆ ಹಕ್ಕು ದಾಖಲಾತಿಗಳನ್ನು ನೀಡಲು ಆಯಾ ಕಾನೂನುಗಳಲ್ಲಿ ಇರುವ ಅವಕಾಶಗಳನ್ನು ಬಳಸಿಕೊಂಡು ಕೆಳಕಂಡ ಮಾನದಂಡಗಳನ್ನು ಅನುಸರಿಸಿ ಹೊಸದಾಗಿ ಕಂದಾಯ ಗ್ರಾಮಗಳನ್ನು ರಚಿಸಲು ಆದೇಶಿಸಿದೆ.

1. ಕುಟುಂಬಗಳ ಸಂಖ್ಯೆ ಸುಮಾರು 50 ಅಥವಾ ಜನಸಂಖ್ಯೆ ಸುಮಾರು 250ನ್ನು ಹೊಂದಿರುವ ದಾಖಲೆರಹಿತ ಜನವಸತಿ ಪ್ರದೇಶಗಳು.
2. ಗ್ರಾಮಕ್ಕಿರಬೇಕಾದ ಜಮೀನಿನ ವಿಸ್ತೀರ್ಣ ಕನಿಷ್ಠ ಸುಮಾರು 100 ಎಕರೆ ಅಥವಾ ಅದಕ್ಕೆ ಮೇಲ್ಪಟ್ಟು – (ಈ ಷರತ್ತನ್ನು ಬೆಟ್ಟಗುಡ್ಡಗಳ ತಪ್ಪಲು ಮತ್ತು ಅರಣ್ಯ ಪ್ರದೇಶದೊಳಗಿನ ಜನವಸತಿ ಪ್ರದೇಶಗಳ ಪ್ರಕರಣದಲ್ಲಿ ಸಕಾರಣದ ಸಮೇತ ಸಡಿಲಸಬಹುದು).
3. ಮೂಲ ಗ್ರಾಮಠಾಣಾಕ್ಕೆ ಹೊಂದಿಕೊಂಡಿರಬಾರದು (ಅಂದಾಜು 1 ಕಿ.ಮೀ. ಅಂತರ ಸೂಕ್ತ)

ಮೇಲ್ಕಂಡ ಮಾನದಂಡಗಳ ವ್ಯಾಪ್ತಿಗೆ ಒಳಪಡುವ ಲಂಬಾಣಿ ತಾಂಡಾ, ಗೊಲ್ಲರಹಟ್ಟಿ, ವಡ್ಡರಹಟ್ಟಿ, ಕುರುಬರಹಟ್ಟಿ, ನಾಯಕರ ಹಟ್ಟಿ, ಮಜರೆ ಗ್ರಾಮ, ಹಾಡಿ, ದೊಡ್ಡಿ, ಪಾಳ್ಯ, ಕ್ಯಾಂಪ್ ಕಾಲೋನಿ, ಮತ್ತು ಇತರೆ ದಾಖಲೆರಹಿತ ಜನವಸತಿ ಪ್ರದೇಶಗಳನ್ನು ಅನುಬಂಧದಲ್ಲಿ ವಿವರಿಸಿರುವ ವಿಧಾನಗಳನ್ನು ಅನುಸರಿಸಿ ಕಂಧಾಯ ಗ್ರಾಮಗಳಾಗಿ ಘೋಷಿಸಲು ಹಾಗು ಅಲ್ಲಿಯ ನಿವಾಸಿಗಳಿಗೆ ನಿಯಮಾನುಸಾರ ಹಕ್ಕು ದಾಖಲಾತಿಗಳನ್ನು ನೀಡಲು ಕ್ರಮ ಕೈಗೊಳ್ಳುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಸಿ.ಮುತ್ತುಕುಮಾರಸ್ವಾಮಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂಮಾಪನ)

ಗೆ:-
ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು.

<u>ಪ್ರತಿಯನ್ನು:-</u>

1) ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
2) ಎಲ್ಲಾ ಪ್ರಾದೇಶಿಕ ಆಯುಕ್ತರುಗಳಿಗೆ.
3) ಎಲ್ಲಾ ಜಿಲ್ಲಾಧಿಕಾರಿಗಳು/ಉಪವಿಭಾಗಾಧಿಕಾರಿಗಳು/ಎಲ್ಲಾ ತಹಶೀಲ್ದಾರ್ ರವರುಗಳಿಗೆ ಜಿಲ್ಲಾಧಿಕಾರಿಗಳ ಮೂಲಕ
4) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
5) ವ್ಯವಸ್ಥಾಪಕ ನಿರ್ದೇಶಕರು, ಡಾ:ಬಿಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು.
6) ವ್ಯವಸ್ಥಾಪಕರು, ತಾಂಡಾ ಅಭಿವೃದ್ಧಿ ನಿಗಮ ನಿಯಮಿತ, ನಂ.6, ಜಿ.ಪಿ.ಆರ್. ಟವರ್, 1ನೇ ಮಹಡಿ, ಪಾರ್ಕ್ ರಸ್ತೆ, ಟಕ್ಸರ್ ಟೌನ್, ಶಿವಾಜಿನಗರ, ಬೆಂಗಳೂರು
7) ವ್ಯವಸ್ಥಾಪಕ ನಿರ್ದೇಶಕರು, ವಾಲ್ಮೀಕಿ ಅಭಿವೃದ್ಧಿ ನಿಗಮ, ಬೆಂಗಳೂರು
8) ವ್ಯವಸ್ಥಾಪಕ ನಿರ್ದೇಶಕರು, ದೇವರಾಜ ಅರಸು ಅಭಿವೃದ್ಧಿ ನಿಗಮ, ಬೆಂಗಳೂರು
9) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು.
10) ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
11) ಉಪನಿರ್ದೇಶಕರು, ಟಿಎನ್ಎಂಸಿ, ಖನಿಜ ಭವನ, ಬೆಂಗಳೂರು.
12) ಮಾನ್ಯ ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
13) ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
14) ಆಂತರಿಕ ಆರ್ಥಿಕ ಸಲಹೆಗಾರರು, ಕಂದಾಯ ಇಲಾಖೆ
15) ಸರ್ಕಾರದ ಉಪ ಕಾರ್ಯದರ್ಶಿ (ಸೇವೆಗಳು) ಸಿಆಸುಇ ಇಲಾಖೆ
16) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು ಇವರ ಆಪ್ತ ಕಾರ್ಯದರ್ಶಿಗಳು
17) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-7)
18) ಸರ್ಕಾರದ ಉಪ ಕಾರ್ಯದರ್ಶಿ, ಕಂದಾಯ ಇಲಾಖೆ, (ಸೇ-1 ಮತ್ತು ಭೂಮಾಪನ) ಇವರ ಆಪ್ತ ಕಾರ್ಯದರ್ಶಿಗಳು.
19) ಹೆಚ್ಚುವರಿ ಪ್ರತಿ/ಶಾಖಾ ರಕ್ಷಾ ಕಡತ.

# ಅನುಬಂಧ

(ಸರ್ಕಾರದ ಆದೇಶ ಸಂಖ್ಯೆ: ಕಂ.ಇ 01 ಭೂದಾಖ 2016 ಬೆಂಗಳೂರು, ದಿನಾಂಕ:01-03-2016ರ ಅನುಬಂಧ)

ವಿಷಯ: ರಾಜ್ಯದಲ್ಲಿರುವ ಲಂಬಾಣಿ ತಾಂಡಾ, ಗೊಲ್ಲರಹಟ್ಟಿ, ವಡ್ಡರಹಟ್ಟಿ, ಕುರುಬರಹಟ್ಟಿ, ನಾಯಕರಹಟ್ಟಿ, ಮಜರೆಗ್ರಾಮ ಹಾಡಿ, ದೊಡ್ಡಿ, ಪಾಳ್ಯ, ಕ್ಯಾಂಪ್, ಕಾಲೋನಿ, ಮತ್ತು ಇತರೆ ದಾಖಲೆರಹಿತ ಜನವಸತಿ ಪ್ರದೇಶಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಅಥವಾ ಅಸ್ತಿತ್ವದಲ್ಲಿರುವ ಕಂದಾಯ ಗ್ರಾಮದ ಭಾಗವಾಗಿ ಪರಿಗಣಿಸಲು ಕಂದಾಯ ಹಾಗೂ ಇತರೆ ಇಲಾಖಾ ಅಧಿಕಾರಿಗಳು ಅನುಸರಿಸಬೇಕಾದ ಕ್ರಮಗಳ ಕುರಿತ ಮಾರ್ಗಸೂಚಿ.

******

## ಪರಿಕಲ್ಪನೆ:

1. ಯಾವುದೇ ಒಂದು ಜನವಸತಿ ಪ್ರದೇಶವು ಅಭಿವೃದ್ಧಿಯ ಮುಖ್ಯವಾಹಿನಿಗೆ ಬರಬೇಕಾದರೆ ಅದಕ್ಕೆ ಸಮಾಜ ಮತ್ತು ಸರ್ಕಾರದ ಅಧಿಕೃತ ಮಾನ್ಯತೆ ಇರಬೇಕು. ರಾಜ್ಯದಲ್ಲಿರುವ ದುರ್ಬಲ ಮತ್ತು ಹಿಂದುಳಿದ ಸಮುದಾಯಗಳು ವಾಸಿಸುವ ಹಲವು ದಾಖಲೆ ರಹಿತ ಜನವಸತಿ ಪ್ರದೇಶಗಳು ಸರ್ಕಾರದ ಅಧಿಕೃತ ಮಾನ್ಯತೆ ಇಲ್ಲದೆ ಮಜರೆ ಗ್ರಾಮಗಳಾಗಿ ಅಸ್ತಿತ್ವದಲ್ಲಿರುತ್ತವೆ. ಇಂತಹ ದಾಖಲೆರಹಿತ ಮಜರೆ ಗ್ರಾಮಗಳನ್ನು ಅಧಿಕೃತವಾಗಿ ಗುರುತಿಸಲು ಕಂದಾಯ ಗ್ರಾಮವೆಂದು ಸರ್ಕಾರದಿಂದ ಘೋಷಿಸಲಾಗುತ್ತದೆ.

2. ದಾಖಲೆರಹಿತ ಜನವಸತಿ ಪ್ರದೇಶಗಳು ಸಾಮಾನ್ಯವಾಗಿ ತಾಂಡಾ, ಹಟ್ಟಿ, ಹಾಡಿ, ದೊಡ್ಡಿ, ಪಾಳ್ಯ, ಮಜರೆ, ಕ್ಯಾಂಪ್, ಕಾಲೋನಿ ಇತ್ಯಾದಿ ಹೆಸರುಗಳಿಂದ ಗುರುತಿಸಲ್ಪಡುತ್ತವೆ. ಇಂತಹ ದಾಖಲೆರಹಿತ ಜನವಸತಿ ಪ್ರದೇಶಗಳನ್ನು ಹೊಸದಾಗಿ ಕಂದಾಯ ಗ್ರಾಮವೆಂದು ಘೋಷಿಸಲು ಇಲ್ಲವೆ ಅದನ್ನು ಹಾಲಿ ಇರುವ ಕಂದಾಯ ಗ್ರಾಮದ ಭಾಗವಾಗಿ ಪರಿಗಣಿಸಲು ಅಥವಾ ಅಸ್ತಿತ್ವದಲ್ಲಿರುವ ಗ್ರಾಮದಲ್ಲಿ ಸೇರ್ಪಡೆಗೊಳಿಸಿಕೊಳ್ಳಲು ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಪ್ರಕರಣ 5 ರ ಅಡಿಯಲ್ಲಿ ಅಧಿಸೂಚನೆ ಹೊರಡಿಸಲಾಗುತ್ತದೆ.

3. ಈ ರೀತಿ ಅಧಿಸೂಚನೆಗೊಂಡ ತಾಂಡಾ, ಹಟ್ಟಿ, ಹಾಡಿ ಇತ್ಯಾದಿ ದಾಖಲೆರಹಿತ ಜನವಸತಿ ಪ್ರದೇಶಗಳು ಕಂದಾಯ ಗ್ರಾಮಗಳಾಗಿ ಪರಿವರ್ತನೆಗೊಂಡಿರುವುದಕ್ಕೆ ಸೂಚಕವಾಗಿ ಅವಕ್ಕೆ ಲಗತ್ತು ಮಾಡಲಾಗಿರುವ ಕೃಷಿ ಇತ್ಯಾದಿ ವಿವಿಧ ವರ್ಗದ ಜಮೀನುಗಳಿಗೆ ಪ್ರತ್ಯೇಕವಾದ ಗ್ರಾಮನಕ್ಷೆ, ಆರ್‌ಟಿಸಿ, ಆಕಾರ್‌ಬಂದ್ ಇತ್ಯಾದಿ ಭೂದಾಖಲೆಗಳು ಸಿದ್ಧಗೊಳ್ಳುತ್ತವೆ. ಅದರಲ್ಲಿ ಗ್ರಾಮಠಾಣವಾಗಿ

ಪರಿಗಣಿತವಾದ ಪ್ರದೇಶಕ್ಕೆ ಪಂಚಾಯತಿ/ಸ್ಥಳೀಯ ಸಂಸ್ಥೆಗಳ ದಾಖಲೆಗಳು ರೂಪಗೊಳ್ಳುತ್ತವೆ. ಕಂದಾಯ ಗ್ರಾಮವನ್ನು ಘಟಕವಾಗಿ ಪರಿಗಣಿಸಿ ತಮ್ಮ ಕಾರ್ಯಯೋಜನೆಗಳನ್ನು ರೂಪಿಸುವ ಇತರೆ ಇಲಾಖೆಗಳು ಅವರಿಗೆ ಸಂಬಂಧಿಸಿದ ದಾಖಲೆಗಳನ್ನು ಹೊಸದಾಗಿ ಸೃಷ್ಠಿಸಿಕೊಳ್ಳುತ್ತವೆ.

4. ಹೊಸ ಕಂದಾಯ ಗ್ರಾಮವು ಯಾವ ಮೂಲ ಗ್ರಾಮ/ಗ್ರಾಮಗಳಿಂದ ಬೇರ್ಪಟ್ಟು ರಚನೆಯಾಗಿದೆಯೋ ಅಂತಹ ಮೂಲ ಗ್ರಾಮದ ಭೂದಾಖಲೆಗಳು, ಪಂಚಾಯ್ತಿ/ಸ್ಥಳೀಯ ಸಂಸ್ಥೆಗಳ ದಾಖಲೆಗಳು ಹಾಗೂ ಇತರೆ ಇಲಾಖೆ / ಶಾಸನಬದ್ಧ ಪ್ರಾಧಿಕಾರಗಳ ದಾಖಲೆಗಳು ಸಹ ಅಗತ್ಯ ಬದಲಾವಣೆಗಳೊಂದಿಗೆ ಕಾಲೋಚಿತಗೊಳ್ಳಬೇಕಾಗುತ್ತದೆ. ತಾಂಡಾ ಇತ್ಯಾದಿಗಳು ಅಧಿಸೂಚಿತ ಗ್ರಾಮದ ಭಾಗವಾಗಿ ಅಥವಾ ಗ್ರಾಮದ ವ್ಯಾಪ್ತಿಗೆ ಸೇರ್ಪಡೆಯಾದಾಗ ಆ ಜನವಸತಿ ಪ್ರದೇಶವನ್ನು ಗ್ರಾಮಠಾಣವಾಗಿ ಪರಿಗಣಿಸಿ ಭೂದಾಖಲೆಗಳು ಹಾಗೂ ಪಂಚಾಯತಿ ದಾಖಲೆಗಳಲ್ಲಿ ಅಗತ್ಯ ನಮೂದು / ತಿದ್ದುಪಡಿಗಳನ್ನು ಮಾಡಿಕೊಳ್ಳಲಾಗುತ್ತದೆ. ಜೊತೆಗೆ ಅಂತಹ ತಾಂಡಾ ಇತ್ಯಾದಿ ದಾಖಲೆ ರಹಿತ ಜನವಸತಿ ಪ್ರದೇಶಗಳಲ್ಲಿ ವಾಸವಿರುವ ಜನರು ವಾಸ ಹಾಗೂ ಇತರೆ ಉದ್ದೇಶಗಳಿಗೆ ಬಳಸುತ್ತಿರುವ ಜಾಗಗಳಿಗೆ ಅಧಿಕೃತ ಸ್ವಾಧೀನದ ಹಕ್ಕು ನೀಡುವ ಕಾರ್ಯವೂ ಆಗಬೇಕಾಗುತ್ತದೆ. ಇಷ್ಟೆಲ್ಲಾ ಪ್ರಕ್ರಿಯೆಗಳು ಜರುಗಿದ ನಂತರವೇ ತಾಂಡಾ, ಹಟ್ಟಿ, ಹಾಡಿ ಇತ್ಯಾದಿ ದಾಖಲೆ ರಹಿತ ಜನವಸತಿ ಪ್ರದೇಶಗಳು ಕಂದಾಯ ಗ್ರಾಮಗಳಾಗಿ ಪರಿವರ್ತನೆಗೊಂಡಿವೆ ಎಂದು ಪರಿಗಣಿಸಲ್ಪಡುತ್ತದೆ.

ಮೇಲ್ಕಂಡ ಎಲ್ಲಾ ಪ್ರಕ್ರಿಯೆಗಳನ್ನು ಕೆಳಕಂಡ 6 ಹಂತಗಳಲ್ಲಿ ನಡೆಸಬೇಕಾಗುತ್ತದೆ.

5. **<u>ಹೊಸ ಕಂದಾಯ ಗ್ರಾಮ ರಚನೆಯ ಹಂತಗಳು:</u>**

   1. ಪ್ರಸ್ತಾವನೆ ರೂಪಿಸುವ ಹಂತ
   2. ಪ್ರಾಥಮಿಕ ಅಧಿಸೂಚನೆ ಹೊರಡಿಸುವ
   3. ವಿಚಾರಣೆ ನಡೆಸುವ ಹಂತ
   4. ಅಂತಿಮ ಅಧಿಸೂಚನೆ ಹೊರಡಿಸುವ ಹಂತ
   5. ಅಂತಿಮ ಅಧಿಸೂಚನೆಯ ನಂತರ ಭೂದಾಖಲೆಗಳನ್ನು ಸಿದ್ಧಪಡಿಸುವ / ಅಮಲು ಮಾಡಿ ಸ್ವತಂತ್ರ ಗ್ರಾಮವಾಗಿ ಅಸ್ತಿತ್ವಕ್ಕೆ ತರುವ ಹಂತ
   6. ಹೊಸದಾಗಿ ಕಂದಾಯ ಗ್ರಾಮವಾಗಿ ಪರಿವರ್ತನೆಯಾದ ಅಥವಾ ಅಸ್ತಿತ್ವದಲ್ಲಿರುವ ಕಂದಾಯ ಗ್ರಾಮದ ಭಾಗವಾಗಿ ಘೋಷಿತವಾದ ತಾಂಡಾ ಇತ್ಯಾದಿ ಜನವಸತಿ ಪ್ರದೇಶಗಳ ನಿವಾಸಿಗಳಿಗೆ ಹಕ್ಕು ದಾಖಲೆಗಳನ್ನು ನೀಡುವ ಮತ್ತು ಗ್ರಾಮ ಪಂಚಾಯತಿ/ಸ್ಥಳೀಯ ಸಂಸ್ಥೆಗಳ ದಾಖಲೆಗಳನ್ನು ಕಾಲೋಚಿತಗೊಳಿಸುವ ಹಂತ

...3

## 6. ಪ್ರಸ್ತಾವನೆ ರೂಪಿಸುವ ಹಂತ:

ಸರ್ಕಾರದ ಆದೇಶದಲ್ಲಿ ನಿಗದಿಪಡಿಸಿದ ಮಾನದಂಡಗಳಂತೆ ಅರ್ಹತೆ ಪಡೆಯುವ ತಾಂಡಾ, ಹಟ್ಟಿ, ಹಾಡಿ ಇತ್ಯಾದಿ ಜನವಸತಿ ಪ್ರದೇಶಗಳನ್ನು ಕಂದಾಯ ಗ್ರಾಮವಾಗಿ ಪರಿವರ್ತಿಸಲು ಅಥವಾ ಹಾಲಿ ಇರುವ ಗ್ರಾಮದ ಭಾಗವಾಗಿ ಪರಿಗಣಿಸಲು ತಾಲ್ಲೂಕು ಮಟ್ಟದಲ್ಲಿ ಕೆಲಸ ಮಾಡುವ ಹಿರಿಯ ಕಂದಾಯ ಅಧಿಕಾರಿಗಳೇ ಖುದ್ದಾಗಿ ಸ್ಥಳಕ್ಕೆ ಭೇಟಿ ನೀಡಿ ಪ್ರಸ್ತಾವನೆಯನ್ನು ಸಿದ್ಧಪಡಿಸಬೇಕು. ಸದರಿ ದಾಖಲೆರಹಿತ ಜನವಸತಿಯನ್ನು ಕಂದಾಯ ಗ್ರಾಮವಾಗಿ ಘೋಷಿಸಲು ಅಥವಾ ಕಂದಾಯ ಗ್ರಾಮದ ಭಾಗವಾಗಿ ಪರಿಗಣಿಸಲು, ಪರಿವರ್ತನೆಯಾಗುವ ಆ ಗ್ರಾಮಗಳಿಗೆ ಯಾವ ಹೆಸರನ್ನಿಡಬೇಕೆಂಬುದರ ಬಗ್ಗೆ ಸ್ಥಳೀಯರ ಅಭಿಪ್ರಾಯ ಅಗತ್ಯ. ಈ ರೀತಿ ಅಭಿಪ್ರಾಯವನ್ನು ಪಡೆಯುವಾಗ ಆದ್ಯತೆಯ ಮೇಲೆ ಕನಿಷ್ಠ ಮೂರು ಹೆಸರುಗಳನ್ನು ಗ್ರಾಮಸ್ಥರಿಂದ ಕೇಳಿ ಪಡೆಯಬೇಕು. ಇಂತಹ ಹೆಸರುಗಳ ಪೈಕಿ ಒಂದನ್ನು ಸ್ಥಳೀಯರು ಹೇಳಿದ ಆದ್ಯತೆಯನ್ನು ಗಮನದಲ್ಲಿರಿಸಿಕೊಂಡು ಆ ಹೆಸರು ತಾಲ್ಲೂಕಿನಲ್ಲಿ ಮನರಾವರ್ತನೆಯಾಗದ ರೀತಿಯಲ್ಲಿ ಆಯ್ಕೆ ಮಾಡಬೇಕು. ಒಂದು ವೇಳೆ ತಾಂಡಾ, ಹಾಡಿ, ಹಟ್ಟಿ ಇತ್ಯಾದಿ ದಾಖಲೆರಹಿತ ಜನವಸತಿ ಪ್ರದೇಶಗಳ ನಿವಾಸಿಗಳು ಒಂದೇ ಹೆಸರನ್ನು ಇಡಲು ಸೂಚಿಸಿದಲ್ಲಿ ಅದನ್ನು ಚುನಾವಣೆಯಲ್ಲಿ ಅನುಸರಿಸುವಂತೆ ಲಾಟರಿ ಎತ್ತುವ ಮೂಲಕ ಯಾವ ಜನವಸತಿ ಪ್ರದೇಶಕ್ಕೆ ಇಡಬೇಕೆಂದು ನಿರ್ಧರಿಸಬಹುದು. ಹಾಗೆ ಆ ಹೆಸರನ್ನು ಹೊಸದಾಗಿ ರಚಿತವಾಗುವ ಕಂದಾಯ ಗ್ರಾಮದ ಹೆಸರು ಎಂದು ಅಧಿಸೂಚನೆಯಲ್ಲಿ ಪ್ರಸ್ತಾಪಿಸಬೇಕು.

## 6(ಎ) ಹೊಸ ಗ್ರಾಮವನ್ನು ರಚಿಸಲು ಪ್ರಸ್ತಾವನೆ ರೂಪಿಸುವಾಗ ಕೆಳಕಂಡ ಕ್ರಮಗಳನ್ನು ಕೈಗೊಳ್ಳಬೇಕು

(1) ಮೂಲ ಗ್ರಾಮದ ನಕ್ಷೆಯಲ್ಲಿ ನೂತನ ಗ್ರಾಮವಾಗಿ ಪರಿವರ್ತಿಸಲು ಉದ್ದೇಶಿಸಿರುವ ತಾಂಡಾ ಇತ್ಯಾದಿ ದಾಖಲೆ ರಹಿತ ಜನವಸತಿ ಪ್ರದೇಶವನ್ನು ಬೇರೆ ಶಾಯಿಯಿಂದ ಸ್ಪಷ್ಟವಾಗಿ ಗುರುತಿಸುವುದು.

(2) ಈ ರೀತಿ ಗುರುತಿಸುವಾಗ ಮೂಲ ಗ್ರಾಮದ ಗ್ರಾಮಠಾಣದ ಗಡಿಗೆ ಹಾಲಿಯಿರುವ ತಾಂಡಾ ಇತ್ಯಾದಿ ದಾಖಲೆ ರಹಿತ ಜನವಸತಿ ಪ್ರದೇಶವು ಕೊನೆಪಕ್ಷ ಒಂದು ಕಿ.ಮೀ. ಅಂತರವಿರುವಂತೆ ನೋಡಿಕೊಳ್ಳುವುದು ಸೂಕ್ತ.

(3) ಉದ್ದೇಶಿತ ಗ್ರಾಮಕ್ಕೆ ಕನಿಷ್ಠ (ಸುಮಾರು) 100 ಎಕರೆ ಅಥವಾ ಅದರ ಮೇಲ್ಪಟ್ಟು ವಿಸ್ತೀರ್ಣ ಸೇರುವಂತೆ ನೋಡಿಕೊಳ್ಳುವುದು ಸೂಕ್ತ.

(4) ಮೂಲ ಗ್ರಾಮದ ನಕಾಶೆಯಲ್ಲಿ ಹೊಸ ಗ್ರಾಮ ಬೇರ್ಪಡಿಸುವ ಬಾಬ್ತು ಸರ್ವೆ ನಂಬರುಗಳನ್ನು ವಿಭಜಿಸಿ ಕೆಂಪು ಮಸಿಯಿಂದ ಹೊಸ ಗ್ರಾಮದ ಗಡಿಯನ್ನು ಗುರುತಿಸುವುದು ಹಾಗೂ ಗಡಿ ಗ್ರಾಮದ ಚೆಕ್ ಬಂದಿಯನ್ನು ದಾಖಲಿಸುವುದು.

(5) ಈ ರೀತಿ ಗುರುತಿಸಿದ ಎರಡೂ (ಹಳೆಯ & ಹೊಸ ಗ್ರಾಮ) ಗ್ರಾಮಗಳಿಗೆ ಸರ್ವೆ ನಂಬರುಗಳನ್ನು ಪ್ರತ್ಯೇಕವಾಗಿ ಈಗಾಗಲೇ ಸರ್ವೆ ಇಲಾಖೆಯಲ್ಲಿ ಅನುಸರಿಸುತ್ತಿರುವ ಪದ್ಧತಿಗೆ ಅನುಗುಣವಾಗಿ ಒಂದರಿಂದ ಪ್ರಾರಂಭಿಸಿ ಸರ್ವೆ ನಂಬರುಗಳನ್ನು ಸೂಚಿಸುವುದು.

(6) ಗ್ರಾಮಗಳನ್ನು ವಿಭಜಿಸುವ ವೇಳೆಯಲ್ಲಿ ಗ್ರಾಮದ ಸ.ನಂ.ಗಳು ಒಂದೇ ಕಡೆ ಬರುವಂತೆ ವಿಭಜಿಸತಕ್ಕದ್ದು. ಯಾವುದೇ ಕಾರಣಕ್ಕೂ ಸರ್ವೆ ನಂ.ಗಳನ್ನು ಉಡಾಫೆಯಾಗಿ (ಗ್ರಾಮದ ಗಡಿಯಿಂದ ಪ್ರತ್ಯೇಕವಾಗಿ) ಬಾರದಂತೆ ಎಚ್ಚರಿಕೆ ವಹಿಸಬೇಕು.

(7) ಮೂಲ ಗ್ರಾಮ ಹಾಗೂ ಉದ್ದೇಶಿತ ಗ್ರಾಮದ ಸರ್ವೆ ನಂ.ಗಳನ್ನು ಯಾವುದೇ ರೀತಿ ವಿಭಜಿಸದಂತೆ ಪೂರಾ ಸ.ನಂ ಗಳನ್ನು ಯಥಾವತ್ತಾಗಿ ಸೇರಿಸತಕ್ಕದ್ದು ಹಾಗೂ ಯಾವುದೇ ಕಾರಣದಿಂದ ಭಾಗಶ: ಸರ್ವೆ ನಂ.ಗಳನ್ನು ರಾಜ್ಯಪತ್ರ ಪ್ರಕಟಣೆಯಲ್ಲಿ ಬಾರದಂತೆ ಗಮನಹರಿಸುವುದು.

(8) ಕಾವಲ್, ಗೋಮಾಳ, ಅರಣ್ಯ ಮುಂತಾದ ಅಪಾರ ವಿಸ್ತೀರ್ಣದ ಏಕ ಸರ್ವೆ ನಂಬರ್ ಜಮೀನುಗಳಲ್ಲಿ ದಾಖಲೆ ರಹಿತ ಜನವಸತಿಗಳು ಬಂದಿದ್ದರೆ ಅವುಗಳನ್ನು ಕಂದಾಯ ಗ್ರಾಮವಾಗಿ ಪರಿವರ್ತಿಸುವಾಗ ಆ ಜನವಸತಿ ಪ್ರದೇಶವನ್ನೊಳಗೊಂಡಂತೆ ಅಲ್ಲಿ ಸಕ್ರಮಗೊಂಡಿರುವ ಜಮೀನುಗಳ ಬ್ಲಾಕ್‌ಗಳನ್ನು ಸಾಧ್ಯವಾದಷ್ಟು ಒಳಗೆ ಸೇರಿಸಿಕೊಂಡು ಗ್ರಾಮದ ಎಲ್ಲೆಯು ಸದರಿ ಸರ್ವೆ ನಂಬರಿನ ಒಂದು ಅಂಚಿಗೆ ಬರುವಂತೆ ಗಡಿ ಗುರುತು ಮಾಡಿ ಮೇಲ್ಕಂಡ ಮಾನದಂಡಗಳನ್ನನುಸರಿಸಿ ಒಟ್ಟು ವಿಸ್ತೀರ್ಣದಲ್ಲಿ ಆ ಗ್ರಾಮಕ್ಕೆ ಲಗತ್ತಾಗಬೇಕಾದ ಜಮೀನಿನ ವಿಸ್ತೀರ್ಣವನ್ನು ನಿಗದಿಪಡಿಸಬೇಕು.

(9) ಮೂಲ ಗ್ರಾಮದಿಂದ ಬೇರ್ಪಡೆಯಾದ ಹೊಸ ಗ್ರಾಮದ ವಿಸ್ತೀರ್ಣ ಮತ್ತು ಆಕಾರ ಹಾಗೂ ಉಳಿಕೆ ಗ್ರಾಮದ ವಿಸ್ತೀರ್ಣ ಮತ್ತು ಆಕಾರಗಳನ್ನು ಒಂದುಗೂಡಿಸಿದರೆ ಮೂಲ ಗ್ರಾಮದ ಆಕಾರಬಂದಿನ ಸರ್ವೆ ನಂ.ಗಳ ಒಟ್ಟು ವಿಸ್ತೀರ್ಣ ಮತ್ತು ಆಕಾರಕ್ಕೆ ತಾಳೆ ಹೊಂದಬೇಕು.

(10) ಉದ್ದೇಶಿತ ಹೊಸ ಗ್ರಾಮದ ಗಡಿಯನ್ನು ಗುರುತಿಸಿದ ನಂತರ ಸದರಿ ನಕ್ಷೆಯಲ್ಲಿ ತಾಂಡಾ ಇತ್ಯಾದಿ ದಾಖಲೆ ರಹಿತ ಜನವಸತಿ ಪ್ರದೇಶದ ಗ್ರಾಮಠಾಣಾವನ್ನು ನಿಖರವಾದ ಅಳತೆಯಿಂದ ಗುರುತಿಸಿ ಸರ್ವೆ ನಂಬರವಾರು ಅದರ ವಿಸ್ತೀರ್ಣವನ್ನು ಕಂಡುಹಿಡಿಯತಕ್ಕದ್ದು. ಇದಕ್ಕಾಗಿ ಕೆ.ಎಸ್.ಆರ್.ಎಸ್.ಎ.ಸಿ ಇವರ ನೆರವು ಪಡೆಯಬಹುದು ಅಥವಾ ಟೋಟಲ್ ಸ್ಟೇಷನ್ ಸರ್ವೆ ವಿಧಾನವನ್ನು ಅಳವಡಿಸಿ ಗ್ರಾಮಠಾಣದ ವಿಸ್ತೀರ್ಣವನ್ನು ನಿಗಧಿಪಡಿಸಬಹುದು.

(11) ಯಾವುದಾದರೂ ದಾಖಲೆ ರಹಿತ ಜನವಸತಿ ಪ್ರದೇಶವು ಮೂಲ ಗ್ರಾಮದ ನಕ್ಷೆಯಲ್ಲಿ ಊರು / ಗ್ರಾಮಠಾಣ ಅಥವಾ ಇತರೆ ಹೆಸರಿನಿಂದ ಮೊದಲೇ ಗುರುತಿಸಲ್ಪಟ್ಟಿದ್ದಲ್ಲಿ ಸದರಿ ಜನವಸತಿಯ ಪ್ರಸ್ತುತ ವ್ಯಾಪ್ತಿಯನ್ನು ನಿಖರವಾಗಿ ಗುರುತಿಸಿ ಆ ವಿಸ್ತೀರ್ಣವನ್ನೂ *ಸೇರಿಸಿ* ಗ್ರಾಮಠಾಣವೆಂದು ಘೋಷಿಸಲು ಪ್ರಸ್ತಾವನೆಯಲ್ಲಿ ಒಳಪಡಿಸಬೇಕು.

...5

(12) ಸದರಿ ಪ್ರದೇಶವನ್ನು ಉದ್ದೇಶಿತ ಹೊಸ ಗ್ರಾಮದ ಗ್ರಾಮಠಾಣಾ ಪ್ರದೇಶವೆಂದು ಅಧಿಸೂಚನೆಯಲ್ಲಿ ನಮೂದಿಸತಕ್ಕದ್ದು.

(13) ಹೀಗೆ ಗ್ರಾಮಠಾಣಾ ಪ್ರದೇಶ ಗುರುತು ಮಾಡುವಾಗ ಭವಿಷ್ಯದಲ್ಲಿ ಆಗಬಹುದಾದ ಗ್ರಾಮಠಾಣಾ ಪ್ರದೇಶದ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಳ್ಳತಕ್ಕದ್ದು.

(14) ಹೊಸ ಗ್ರಾಮ ಮತ್ತು ಮೂಲ ಗ್ರಾಮದ ಉಳಿಕೆ ಸರ್ವೆ ನಂ ಬಾಬ್ತು ಬದಲಾವಣೆಯಾದ ಹೊಸ ಸರ್ವೆ ನಂಬರ್‌ಗಳು ಹಾಗೂ ಅವುಗಳ ಹಳೇ ಸರ್ವೆ ನಂಬರ್‌ಗಳು ಹಾಗೂ ಆಕಾರ ಒಳಗೊಂಡ ತ:ಖ್ತೆಯನ್ನು ತಯಾರಿಸತಕ್ಕದ್ದು.

ಮೇಲೆ ಸೂಚಿಸಿದ ವಿಷಯಗಳನ್ನು ಗಮನದಲ್ಲಿಟ್ಟುಕೊಂಡ ಹೊಸ ಗ್ರಾಮಗಳ ರಚನೆ ಬಗ್ಗೆ ಪ್ರಸ್ತಾವನೆ ತಯಾರಿಸತಕ್ಕದ್ದು.

6(ಬಿ). ಪ್ರಸ್ತಾವನೆಯ ಜೊತೆಗೆ ಕರಡು ಪ್ರಾಥಮಿಕ ಅಧಿಸೂಚನೆಯನ್ನು ಸಿದ್ಧಪಡಿಸಿ ಲಗತ್ತಿಸಬೇಕು. ಸದರಿ ಅಧಿಸೂಚನೆಯಲ್ಲಿ ತಾಂಡಾ ಇತ್ಯಾದಿ ಜನವಸತಿ ಪ್ರದೇಶಗಳಿಗೆ ಹಾಲಿ ಇರುವ ಹೆಸರು ಮತ್ತು ಅದಕ್ಕೆ ಪ್ರಸ್ತಾಪಿಸಲಿರುವ ಹೊಸ ಹೆಸರು ಹಾಗೂ ಅದು ಒಳಪಡುವ ಪಂಚಾಯ್ತಿಯ ವ್ಯಾಪ್ತಿಯ ವಿವರವನ್ನು ನಮೂದಿಸಬೇಕು. ಪ್ರಸ್ತಾಪಿತ ಹೊಸ ಕಂದಾಯ ಗ್ರಾಮಕ್ಕೆ ಸೇರಲ್ಪಡುವ ಸರ್ವೆ ನಂಬರ್ ಜಮೀನು ಮತ್ತು ವಿಸ್ತೀರ್ಣವನ್ನು ನಮೂದಿಸುವಾಗ ಹಳೇ ಸರ್ವೆ ನಂಬರ್ ಮತ್ತು ವಿಸ್ತೀರ್ಣ ಹಾಗೂ ಅದಕ್ಕೆ ನೀಡುವ ಹೊಸ ಸರ್ವೆ ನಂಬರ್ ಮತ್ತು ವಿಸ್ತೀರ್ಣವನ್ನು ಅಧಿಸೂಚನೆಯಲ್ಲಿ ಸ್ಪಷ್ಟವಾಗಿ ನಮೂದಿಸಬೇಕು. ಹಾಗೆಯೇ ಗ್ರಾಮಠಾಣಕ್ಕಾಗಿ ನಿಗದಿಪಡಿಸುವ ವಿಸ್ತೀರ್ಣವನ್ನು ಟೋಟಲ್ ಸ್ಟೇಷನ್ ಸರ್ವೆ ಮೂಲಕ ಗುರುತಿಸಿ ಅದರ ವಿಸ್ತೀರ್ಣವನ್ನು ಅಧಿಸೂಚನೆಯಲ್ಲಿ ತರಬೇಕು. ಹಾಗೂ ಆ ಜಾಗವು ಯಾವ ಸರ್ವೆನಂಬರ್‌ನಿಂದ ತೆಗೆಯಲಾಗಿದೆಯೋ ಅಂತಹ ಸರ್ವೆ ನಂಬರ್‌ನಿಂದ ಗ್ರಾಮ ಠಾಣಕ್ಕೆ ತೆಗೆದುಕೊಂಡ ವಿಸ್ತೀರ್ಣವನ್ನು ಕಡಿತಗೊಳಿಸಿ ಉಳಿದ ವಿಸ್ತೀರ್ಣವನ್ನು ಅಧಿಸೂಚನೆಯಲ್ಲಿ ಆ ಸರ್ವೆ ನಂಬರ್‌ನ ಮುಂದೆ ತರಬೇಕು.

6(ಸಿ). ಕರಡು ಅಧಿಸೂಚನೆಯ ಎರಡನೇ ಭಾಗದಲ್ಲಿ ವಿಭಜನೆಯ ನಂತರ ಮೂಲ ಗ್ರಾಮದಲ್ಲಿ ಉಳಿಯುವ ಸರ್ವೆ ನಂಬರುಗಳಿಗೆ ಹಳೆ ಸರ್ವೆ ನಂಬರ್ ಮತ್ತು ವಿಸ್ತೀರ್ಣ ಹಾಗೂ ಅವುಗಳಿಗೆ ನೀಡುವ ಹೊಸ ಸರ್ವೆ ನಂಬರ್ ಮತ್ತು ವಿಸ್ತೀರ್ಣವನ್ನು ಸ್ಪಷ್ಟವಾಗಿ ನಮೂದಿಸಬೇಕು.

...6

ಮೂಲ ಗ್ರಾಮದ ಗ್ರಾಮಠಾಣಕ್ಕೆ ಹೊಂದಿಕೊಂಡ ವ್ಯಾಪ್ತಿಯ ಯಾವುದಾದರೂ ಸರ್ವೆ ನಂಬರ್‌ಗಳಲ್ಲಿ ವಸತಿಗಳು ಬಂದಿದ್ದರೆ ಆ ಸರ್ವೆ ನಂಬರ್ ಭಾಗವನ್ನು ಗ್ರಾಮಠಾಣವೆಂದು ನಮೂದಿಸಿ ಅಧಿಸೂಚನೆಗೆ ಪ್ರಸ್ತಾಪಿಸಬೇಕು. ಹಾಗೆಯೇ ಗ್ರಾಮದ ಗಡಿಯಿಂದ 1 ಕಿ.ಮೀ. ಅಂತರದ ಒಳಗೆ ಬರುವ ವಸತಿ ಪ್ರದೇಶ ಅಥವಾ ಹೊಸ ಕಂದಾಯ ಗ್ರಾಮವಾಗಿ ಪರಿವರ್ತನೆಗೊಳ್ಳಲು ಅರ್ಹವಾಗದ ತಾಂಡಾ ಇತ್ಯಾದಿ ದಾಖಲೆ ರಹಿತ ಜನವಸತಿ ಪ್ರದೇಶಗಳನ್ನು ಅಧಿಸೂಚನೆಗೆ ಒಳಪಡಿಸಿ ಅವುಗಳ ವಿಸ್ತೀರ್ಣವನ್ನು ಗ್ರಾಮಠಾಣವೆಂದು ನಮೂದಿಸಬೇಕು.

## 7. ಪ್ರಾಥಮಿಕ ಅಧಿಸೂಚನೆಯ ಹಂತ:

7(1). ಈ ಹಂತದಲ್ಲಿ ತಾಲ್ಲೂಕು/ ಉಪ ವಿಭಾಗದಿಂದ ಸ್ವೀಕೃತವಾದ ಪ್ರಸ್ತಾವನೆಯನ್ನು ಜಿಲ್ಲಾ ಮಟ್ಟದಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು ಕಂದಾಯ, ಭೂ ಮಾಪನ ಹಾಗೂ ಗ್ರಾಮ ಪಂಚಾಯತಿಗಳಲ್ಲಿ ಅನುಷ್ಠಾನಗೊಳ್ಳುವ ಅಂಶವನ್ನು ಗಮನದಲ್ಲಿರಿಸಿಕೊಂಡು ಪರಿಶೀಲನೆ ನಡೆಸಬೇಕು. ತಪ್ಪು ಒಪ್ಪುಗಳಿದ್ದಲ್ಲಿ ಅವನ್ನು ಸರಿಪಡಿಸಿ ಭೂಕಂದಾಯ ಕಾಯ್ದೆಯ ಕಲಂ 6(1)ರ ನಿಯಮ 4 ರಡಿಯಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಬೇಕು.

7(2) ದಾಖಲೆ ರಹಿತ ಜನವಸತಿ ಪ್ರದೇಶಗಳು ನಗರ / ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬಂದಿದ್ದರೆ ಅವುಗಳನ್ನು ಕಂದಾಯ ಗ್ರಾಮವಾಗಿಸುವ ಅವಶ್ಯಕತೆ ಬರುವುದಿಲ್ಲ. ಆದಾಗ್ಯೂ ಅಂತಹ ಜನವಸತಿಗಳಲ್ಲಿರುವ ನಿವಾಸಿಗಳಿಗೆ ಹಕ್ಕು ದಾಖಲೆಗಳನ್ನು ನೀಡಲು ಈ ಯೋಜನೆಯನ್ನು ಬಳಸುವ ಪ್ರಸಂಗ ಬಂದಲ್ಲಿ ಆ ಬಗ್ಗೆ ವಾಸ್ತವ ಸ್ಥಿತಿಯನ್ನು ವಿವರಿಸಿ ಸರ್ಕಾರದ ಪೂರ್ವಾನುಮತಿ ಪಡೆದು ಮುಂದುವರೆಯಬೇಕು.

7(3) ಜಿಲ್ಲಾಧಿಕಾರಿಗಳಿಂದ ಸ್ವೀಕೃತವಾಗುವ ಪ್ರಾಥಮಿಕ ಅಧಿಸೂಚನೆಯ ಪ್ರಸ್ತಾವನೆಗಳನ್ನು ಸರ್ಕಾರದ ಹಂತದಲ್ಲಿ ಪರಿಶೀಲಿಸಿ ಅದರಲ್ಲಿ ಒಳಗೊಂಡಿರುವ ತಾಂಡಾ ಇತ್ಯಾದಿ ದಾಖಲೆರಹಿತ ಜನವಸತಿ ಪ್ರದೇಶಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸುವ ಸಂಬಂಧ ಇತರೆ ಇಲಾಖೆಗಳು ಅಂದರೆ ಅರಣ್ಯ, ಪಶುಸಂಗೋಪನೆ, ಕೃಷಿ, ನೀರಾವರಿ ಇತ್ಯಾದಿ ಸಂಬಂಧಿತ ಇಲಾಖೆಗಳ ಸಹಮತಿ/ಅಭಿಪ್ರಾಯ ಅವಶ್ಯವೆನಿಸಿದಲ್ಲಿ ಅದನ್ನು ಪಡೆಯಬೇಕಾಗುತ್ತದೆ. ಕಂದಾಯ ಗ್ರಾಮವಾಗಿ ಪರಿವರ್ತನೆಯಾಗುವ ತಾಂಡಾ ಇತ್ಯಾದಿ ಜನವಸತಿ ಪ್ರದೇಶಗಳು ನಿರ್ಮಾಣಗೊಂಡಿರುವ ಜಮೀನುಗಳು ಯಾವ ಮೂಲ ಉದ್ದೇಶಕ್ಕೆ ಮೀಸಲಾಗಿಸಲ್ಪಟ್ಟಿವೆ ಎಂಬುದನ್ನು ಗಮನಿಸಿ ಆ ಉದ್ದೇಶದಿಂದ ಅವುಗಳನ್ನು ಮುಕ್ತಗೊಳಿಸುವ

...7

ಪ್ರಕ್ರಿಯೆಯನ್ನು ಜೊತೆಯಲ್ಲಿಯೇ ನಡೆಸಲು ಭೂಕಂದಾಯ ಕಾಯ್ದೆಯ ಸಂಬಂಧಿತ ಕಲಂಗಳಲ್ಲಿ ಸೂಚಿಸಿರುವಂತೆ ಕ್ರಮವಹಿಸಬೇಕು.

8. ವಿಚಾರಣಾ ಹಂತ:

ಸರ್ಕಾರದಿಂದ ಅನುಮೋದನೆಗೊಂಡು ಸ್ವೀಕೃತವಾಗುವ ಪ್ರಾಥಮಿಕ ಅಧಿಸೂಚನೆಗಳನ್ನು ಜಿಲ್ಲಾಧಿಕಾರಿಗಳು, ಸ್ಥಳೀಯ ಪಂಚಾಯ್ತಿ / ಸಂಸ್ಥೆಗಳು ಹಾಗೂ ಸಾರ್ವಜನಿಕರ ಮಾಹಿತಿಗಾಗಿ ಪ್ರಚುರಪಡಿಸಬೇಕು. ಈ ಸಂಬಂಧ ಸ್ವೀಕೃತವಾಗುವ ಸಲಹೆ/ಸೂಚನೆ/ಆಕ್ಷೇಪಣೆಗಳನ್ನು ಕರ್ನಾಟಕ ಭೂಕಂದಾಯ ನಿಯಮಗಳು 1967ರ ನಿಯಮ 6 ರಿಂದ 9 ರಲ್ಲಿ ನಿರ್ದಿಷ್ಟಪಡಿಸಲಾದಂತೆ ವಿಚಾರಣೆ ನಡೆಸಿ ತಮ್ಮ ಅಭಿಪ್ರಾಯದೊಂದಿಗೆ ಪುನ: ಸರ್ಕಾರಕ್ಕೆ ಅಂತಿಮ ಅಧಿಸೂಚನೆಗಾಗಿ ಸಲ್ಲಿಸಬೇಕು.

9. ಅಂತಿಮ ಅಧಿಸೂಚನೆ

ಈ ಹಂತದಲ್ಲಿ ಪ್ರಾಥಮಿಕ ಅಧಿಸೂಚನೆಗೆ ಬಂದ ಸಲಹೆ/ಸೂಚನೆ/ಆಕ್ಷೇಪಣೆಗಳ ಕುರಿತು ಜಿಲ್ಲಾಧಿಕಾರಿಗಳ ವಿಚಾರಣೆಯಿಂದ ವ್ಯಕ್ತವಾದ ಅಭಿಪ್ರಾಯ/ಶಿಫಾರಸ್ಸುಗಳನ್ನು ಗಮನದಲ್ಲಿರಿಸಿಕೊಂಡು ಸ್ವೀಕೃತವಾಗಿದ್ದ ಆಕ್ಷೇಪಣೆಗಳನ್ನು ಮಾನ್ಯ ಮಾಡುವ ಅಥವಾ ತಿರಸ್ಕರಿಸುವ ಕುರಿತು ಸೂಕ್ತ ತೀರ್ಮಾನ ಕೈಗೊಂಡು ಸರ್ಕಾರವು ಅಂತಿಮ ಅಧಿಸೂಚನೆಯನ್ನು ಹೊರಡಿಸುತ್ತದೆ. ಈ ರೀತಿ ಹೊರಡಿಸುವ ಅಂತಿಮ ಅಧಿಸೂಚನೆಯಲ್ಲಿ ಕಂದಾಯ ಗ್ರಾಮವಾಗಿ ಪರಿವರ್ತನೆಗೊಳ್ಳುವ ತಾಂಡಾ ಇತ್ಯಾದಿ ದಾಖಲೆ ರಹಿತ ಜನವಸತಿ ಪ್ರದೇಶಗಳು ನಿರ್ಮಾಣವಾಗಿರುವ ವಿಸ್ತೀರ್ಣದ (ಗ್ರಾಮಠಾಣದ) ಜಾಗವನ್ನು ಅದರ ಮೂಲ ಉದ್ದೇಶಗಳಿಂದ ಮುಕ್ತಗೊಳಿಸಿ ಅಧಿಸೂಚನೆ ಹೊರಡಿಸಬೇಕು. ಖಾಸಗಿ ಜಮೀನುಗಳಲ್ಲಿ ನಿರ್ಮಾಣಗೊಂಡಿರುವ ತಾಂಡಾ ಇತ್ಯಾದಿ ಜನವಸತಿ ಪ್ರದೇಶಗಳನ್ನು ಪರಿವರ್ತಿಸುವಾಗ ಭೂ ಸುಧಾರಣಾ ಕಾಯ್ದೆಯ ನಿಯಮಗಳಿಗೆ ಅನುಸಾರ ಕ್ರಮ ಜರುಗಿಸಿ ಅಂತಿಮ ಅಧಿಸೂಚನೆ ಹೊರಡಿಸಬೇಕು. ಅರಣ್ಯ ಪ್ರದೇಶಗಳಲ್ಲಿ ನಿರ್ಮಾಣವಾಗಿರುವ ತಾಂಡಾ ಇತ್ಯಾದಿ ದಾಖಲೆ ರಹಿತ ಜನವಸತಿಗಳು The Scheduled Tribes and other Traditional Forest Dwellers (Recognition of Forest Rights) Act 2006ರ ಪ್ರಕರಣ 2 ರನ್ವಯ ಕಂದಾಯ ಗ್ರಾಮವಾಗಲು ಅರ್ಹತೆ ಪಡೆದಿದ್ದರೆ ಅವುಗಳಿಗೆ ಅಂತಿಮ ಅಧಿಸೂಚನೆ ಹೊರಡಿಸಬೇಕು. ಈ ಅಧಿನಿಯಮದ ವ್ಯಾಪ್ತಿಯಲ್ಲಿ ಕಂದಾಯ ಗ್ರಾಮವಾಗಲು ಅರ್ಹತೆ ಪಡೆಯದ ತಾಂಡಾ ಇತ್ಯಾದಿ ದಾಖಲೆ ರಹಿತ ಜನವಸತಿ ಪ್ರದೇಶಗಳ ವಿಷಯದಲ್ಲಿ ಅರಣ್ಯ ಇಲಾಖೆಯಿಂದ ಅವಶ್ಯ ಅನುಮತಿ ಪಡೆದು ಅಧಿಸೂಚನೆ ಹೊರಡಿಸಬೇಕು.

...8

10. ಅಂತಿಮ ಅಧಿಸೂಚನೆಯ ನಂತರದ ಕಾರ್ಯಗಳು

ಅಂತಿಮ ಅಧಿಸೂಚನೆ ಹೊರಡಿಸಲ್ಪಟ್ಟ ನಂತರ ಅದನ್ನು ಸಂಬಂಧಪಟ್ಟ ಎಲ್ಲಾ ಇಲಾಖೆಗಳ ದಾಖಲಾತಿಗಳಲ್ಲಿ ಅಮಲು ಮಾಡುವ ಹಾಗೂ ಅಲ್ಲಿ ವಾಸವಿರುವ ನಿವಾಸಿಗಳಿಗೆ ಸೇರಿರುವ ಜಾಗಕ್ಕೆ ಹಕ್ಕು ದಾಖಲೆಗಳನ್ನು ನೀಡುವ ಕೆಲಸಗಳನ್ನು ಕೈಗೊಳ್ಳಬೇಕು.

ಪರಿವರ್ತಿತ ಗ್ರಾಮದ ನಿವಾಸಿಗಳಿಗೆ ಹಕ್ಕು ದಾಖಲೆಗಳನ್ನು ನೀಡುವ ಕುರಿತು:

ಕಂದಾಯ ಗ್ರಾಮವಾಗಿ ಪರಿವರ್ತನೆಗೊಂಡ ಹಾಗೂ ಹಾಲಿ ಇರುವ ಕಂದಾಯ ಗ್ರಾಮಕ್ಕೆ ಹೊಂದಿಕೊಂಡಂತೆ ಇರುವ ಅಥವಾ ಗ್ರಾಮದ ವ್ಯಾಪ್ತಿಯಲ್ಲಿದ್ದು ಪ್ರತ್ಯೇಕ ಕಂದಾಯ ಗ್ರಾಮವಾಗಲು ಅರ್ಹತೆ ಪಡೆಯಲಾಗದಂತಹ ತಾಂಡಾ ಇತ್ಯಾದಿ ದಾಖಲೆ ರಹಿತ ಜನವಸತಿ ಪ್ರದೇಶಗಳಲ್ಲಿರುವ ನಿವಾಸಿಗಳಿಗೆ ಅವರ ಸ್ವಾಧೀನಾನುಭವದಲ್ಲಿರುವ ಜಾಗಗಳಿಗೆ ಹಕ್ಕು ದಾಖಲೆಗಳನ್ನು ನೀಡುವ ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ. ಈ ಸಂಬಂಧ ಅದು ಸರ್ಕಾರಿ ಜಮೀನಾಗಿದ್ದಲ್ಲಿ ಕರ್ನಾಟಕ ಭೂ ಮಂಜೂರಾತಿ ನಿಯಮ 1969 ರನ್ವಯ, ಖಾಸಗಿ ಜಮೀನಾಗಿದ್ದಲ್ಲಿ ಕರ್ನಾಟಕ ಭೂ ಸುಧಾರಣೆ ಕಾಯ್ದೆಯನ್ವಯ ಹಾಗೂ ಅರಣ್ಯ ಭೂಮಿಯಾಗಿದ್ದಲ್ಲಿ The Scheduled Tribes and other Traditional Forest Dwellers(Recognition of Forest Rights) Act 2006 ಪ್ರಕರಣ 2 ರನ್ವಯ ಕ್ರಮವಹಿಸಿ ಹಕ್ಕುಪತ್ರ ನೀಡುವ ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ.

11. ವಿವಿಧ ಇಲಾಖೆಗಳ ದಾಖಲಾತಿಗಳನ್ನು ಕಾಲೋಚಿತಗೊಳಿಸುವ ಕುರಿತು:

ಈ ಹಂತದಲ್ಲಿ ಕೆಳಕಂಡ ಇಲಾಖೆಗಳು ಕಾರ್ಯನಿರ್ವಹಿಸುತ್ತವೆ.

(1) ಕಂದಾಯ ಇಲಾಖೆ:

ಕಂದಾಯ ಇಲಾಖೆಯು ಗ್ರಾಮದ ದಫ್ತರುಗಳಲ್ಲಿ ಹೊಸದಾಗಿ ಸೃಷ್ಟಿಯಾದ ಕಂದಾಯ ಗ್ರಾಮಕ್ಕೆ ಪ್ರತ್ಯೇಕ ಆರ್.ಟಿ.ಸಿ, ಮ್ಯುಟೇಷನ್, ಖಾತೆ ವಹಿ, ಕಿರ್ದಿ, ಬಂಜರ್ ತಃಖ್ತೆ ಮುಂತಾದ ಗ್ರಾಮಲೆಕ್ಕಾಧಿಕಾರಿಗಳ ಕೈಪಿಡಿಯಲ್ಲಿ ನಿರ್ದಿಷ್ಟಪಡಿಸಿರುವ ಎಲ್ಲಾ ವಹಿಗಳನ್ನು ಹೊಸದಾಗಿ ರೂಪಿಸಬೇಕು. ಹಾಗೆಯೇ ಮೂಲ ಗ್ರಾಮದ ದಫ್ತರನಲ್ಲಿಯೂ ಸಹ ಸೂಕ್ತ ಬದಲಾವಣೆಗಳನ್ನು ಮಾಡಿಕೊಂಡು ಅದಕ್ಕೆ ಪ್ರತ್ಯೇಕ ದಫ್ತರಗಳನ್ನು ನಿರ್ವಹಿಸಬೇಕು.

**(2)ಭೂ ಮಾಪನ ಇಲಾಖೆ:**

ಕಂದಾಯ ಇಲಾಖೆ ಮತ್ತು ಭೂ ಮಾಪನ ಇಲಾಖೆಗಳಲ್ಲಿ ಕಂದಾಯ ಆಡಳಿತಕ್ಕೆ ಹಾಗೂ ಸಾರ್ವಜನಿಕರಿಗೆ ಉಪಯೋಗವಾಗುವಂತಹ ಹಲವಾರು ದಾಖಲೆಗಳು ಗ್ರಾಮವಾರು ನಿರ್ವಹಿಸಲ್ಪಡುತ್ತಿರುತ್ತವೆ. ತಾಂಡಾ ಇತ್ಯಾದಿ ದಾಖಲೆ ರಹಿತ ಜನವಸತಿ ಪ್ರದೇಶಗಳು ಹೊಸ ಗ್ರಾಮಗಳಾಗಿ ಘೋಷಿಸಲ್ಪಟ್ಟ ನಂತರ ಎಲ್ಲಾ ಕಂದಾಯ ಹಾಗೂ ಸರ್ವೆ ದಾಖಲೆಗಳನ್ನು ಆಯಾ ಗ್ರಾಮಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ನಿರ್ವಹಿಸುವುದು ಅತ್ಯವಶ್ಯಕವಾಗಿರುತ್ತದೆ. ಆದುದರಿಂದ ಅಂತಿಮ ಅಧಿಸೂಚನೆಯಾದ ತಾಂಡಾ ಇತ್ಯಾದಿ ದಾಖಲೆ ರಹಿತ ಜನವಸತಿ ಪ್ರದೇಶಗಳಿಗೆ ಹೊಸದಾಗಿ ಆಕಾರ ಬಂದ್, ಅಸೆಸ್‌ಮೆಂಟ್ ವಹಿ, ಗ್ರಾಮ ನಕಾಶೆ, ಕೆ.ಡಿ.ಪಿ / ಕೆ.ಜಿ.ಪಿ, ಟಿಪ್ಪಣಿ ಮುಂತಾದ ಸರ್ವೆ ದಾಖಲೆಗಳನ್ನು ಸಿದ್ಧಪಡಿಸಬೇಕು. ಹಾಗೆಯೇ ಮೂಲ ಗ್ರಾಮಗಳಿಗೂ ಈ ಎಲ್ಲಾ ದಾಖಲೆಗಳನ್ನು ಅಗತ್ಯ ತಿದ್ದುಪಡಿಯೊಂದಿಗೆ ಪ್ರತ್ಯೇಕವಾಗಿ ನಿರ್ವಹಿಸುವ ವ್ಯವಸ್ಥೆ ಬಗ್ಗೆ ಈ ಕೆಳಗಿನ ಸೂಚನೆಗಳಂತೆ ಕ್ರಮ ಕೈಗೊಳ್ಳತಕ್ಕದ್ದು.

ಎ. ಮೂಲ ಗ್ರಾಮದಿಂದ ಬೇರ್ಪಡೆಯಾದ ಹೊಸ ಗ್ರಾಮಕ್ಕೆ ಪ್ರತ್ಯೇಕವಾದ ದಾಖಲೆಗಳು ಅವಶ್ಯಕವಾಗಿರುವುದರಿಂದ ಅಂತೆಯೇ ಅಂತಿಮ ಅಧಿಸೂಚನೆಯಂತೆ ಬೇರ್ಪಡೆಯಾದ ಗ್ರಾಮದ ಸರ್ವೆ ನಂ ಗಳು ಹಾಗೂ ಉಳಿಕೆ ಮೂಲ ಗ್ರಾಮದ ಸರ್ವೆ ನಂ ಗಳ ಬಾಬ್ತು ಮೂಲ ದಾಖಲೆಗಳಿಂದ ನಕಲುಗಳನ್ನು ತಯಾರಿಸಿ ಅವುಗಳನ್ನು ತಹಶೀಲ್ದಾರರಿಂದ / ಭೂದಾಖಲೆಗಳ ಸಹಾಯಕ ನಿದೇಶಕರಿಂದ ದೃಢೀಕರಿಸುವುದು.

ಬಿ. ಹೊಸ ಗ್ರಾಮ ಹಾಗೂ ಉಳಿದ ಮೂಲ ಗ್ರಾಮಕ್ಕೆ ಸೇರಿದ ಸರ್ವೆ ನಂ ಬಾಬ್ತು ಪ್ರತ್ಯೇಕವಾದ ಕಚ್ಚಾ ನಕ್ಷೆ ತಯಾರಿಸಿ ಮುದ್ರಣಕ್ಕಾಗಿ ಭೂ ಮಾಪನ ಇಲಾಖೆಯ ಆಯುಕ್ತರಿಗೆ ಕಳುಹಿಸುವುದು.

ಸಿ. ಮೂಲ ಗ್ರಾಮದ ಕಡತಗಳಲ್ಲಿ ಸದರಿ ಗ್ರಾಮದಲ್ಲಿ ಹೊಸ ಗ್ರಾಮ ರಚನೆ ಬಗ್ಗೆ ಸರ್ಕಾರದಿಂದ ಆದ ಆದೇಶದ ಬಗ್ಗೆ ಕೆಂಪು ಮಸಿಯಿಂದ ಷರಾ ಬರೆಯುವುದು.

ಡಿ. ಕಂಡಿಕೆ (1) ರಂತೆ ತಯಾರಿಸಿದ ದಾಖಲೆಗಳಲ್ಲಿ ಉಳಿಕೆ ಗ್ರಾಮ ಮತ್ತು ಹೊಸ ಗ್ರಾಮಗಳಿಗೆ ಸೇರಿದ ಹಳೆಯ ಸರ್ವೆ.ನಂ ಗಳ ಬಾಬ್ತು ಗುಂಡು ಸುತ್ತಿ ಈಗ ಹೊಸದಾಗಿ ನೀಡಲಾದ ಸರ್ವೆ ನಂ ಗಳನ್ನು ಕೆಂಪು ಮಸಿಯಿಂದ ದಾಖಲು ಮಾಡುವುದು.

ಇ. ಎರಡು ಗ್ರಾಮಗಳಿಗೆ ಪ್ರತ್ಯೇಕವಾಗಿ ತ್ರಿಪ್ರತಿ ಆಕಾರಬಂದು, ದ್ವಿಪ್ರತಿ ಅಟ್ಲಾಸ್‌ಗಳ ನಕಲುಗಳನ್ನು ತಯಾರಿಸಿ ದೃಢೀಕರಿಸಿ ತಾಲ್ಲೂಕು ಕಚೇರಿಯಲ್ಲಿಡತಕ್ಕದ್ದು ಹಾಗೂ ಹೊಸದಾಗಿ ತಯಾರಿಸಲ್ಪಟ್ಟ ಆಕಾರ ಬಂದುಗಳನ್ನು ಆಯಾ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಭೂ ಮಾಪನಾ ಉಪನಿರ್ದೇಶಕರವರು ಮೇಲು ಸಹಿ ಮಾಡತಕ್ಕದ್ದು.

ಎಫ್. ಹೊಸ ಗ್ರಾಮ ಹಾಗೂ ಉಳಿಕೆ ಮೂಲ ಗ್ರಾಮದ ಬಾಬ್ತು ಬದಲಾವಣೆಯಾದ ಸರ್ವೆ ನಂ ಗಳನ್ನು ಸೂಚಿಸುವ ವಿವರವಾದ ಸಮನ್ವಯ ತ:ಖ್ತೆಯನ್ನು ದ್ವಿಪ್ರತಿಯಲ್ಲಿ ತಯಾರಿಸಿ ಅದನ್ನು ತಹಶೀಲ್ದಾರರು / ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸತಕ್ಕದ್ದು.

ಜಿ. ಯಾವುದೇ ಕಾರಣದಿಂದ ಮೂಲ ಗ್ರಾಮದ ದಾಖಲೆಗಳನ್ನು ವಿಭಜನೆ (ಪ್ರತ್ಯೇಕಿಸಿ) ಗೊಳಿಸತ್ಕಕದ್ದಲ್ಲ. ಹೊಸ ಹಾಗೂ ಉಳಿಕೆ ಮೂಲ ಗ್ರಾಮದ ಬಾಬ್ತು ಸರ್ವೆ ನಂ ಗಳ ನಕಲುಗಳನ್ನು ಅಧಿಸೂಚನೆಯಂತೆ ತಯಾರಿಸಿ ದೃಡೀಕರಿಸಿ ಇಡತಕ್ಕದ್ದು.

ಭೂ ಮಾಪನ ಇಲಾಖೆಯು ಮೂಲ ಗ್ರಾಮ ಮತ್ತು ಹೊಸ ಗ್ರಾಮಕ್ಕೆ ಅಲಾಯಿದ ನಕ್ಷೆಗಳು, ಆಕಾರಬಂದ್ ಹಾಗೂ ಇತರೆ ಎಲ್ಲಾ ಸರ್ವೆ ದಾಖಲಾತಿಗಳನ್ನು ರೂಪಿಸಬೇಕು. ಹಾಗೆಯೇ ವಿಭಜನೆಗೊಂಡ ಸರ್ವೆ ನಂಬರ್‌ಗಳಿಗೆ ಪೋಡಿ ಮಾಡಿ ಗ್ರಾಮಠಾಣಾ ಮತ್ತು ಸರ್ವೆ ನಂಬರ್‌ನಲ್ಲಿ ಬಾಕಿ ಉಳಿಯುವ ಜಾಗಕ್ಕೆ ಪ್ರತ್ಯೇಕ ನಂಬರ್ ನೀಡಬೇಕು.

**(3) <u>ಸ್ಥಳೀಯ ಸಂಸ್ಥೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ)</u>**

ಹೊಸದಾಗಿ ರಚನೆಯಾದ ಕಂದಾಯ ಗ್ರಾಮದ ವ್ಯಾಪ್ತಿ ಹೊಂದಿರುವ ಸ್ಥಳೀಯ ಸಂಸ್ಥೆಗಳು / ಗ್ರಾಮ ಪಂಚಾಯತಿಗಳು ಗ್ರಾಮಠಾಣವಾಗಿ ಘೋಷಣೆಯಾದ ವಿಸ್ತೀರ್ಣದ ಜಾಗವನ್ನು ತಮ್ಮ ದಾಖಲೆಗಳಿಗೆ ತೆಗೆದುಕೊಳ್ಳಬೇಕು. ಅದರಲ್ಲಿ ಬರುವ ಸಾರ್ವಜನಿಕ ಆಸ್ತಿಗಳು, ಸರ್ಕಾರಿ ಆಸ್ತಿಗಳು, ಖಾಸಗಿ ಸ್ವತ್ತುಗಳು ಹಾಗೂ ಸ್ಥಳೀಯ ಸಂಸ್ಥೆಗೆ ಸೇರುವ ಆಸ್ತಿಗಳಿಗೆ ಪ್ರತ್ಯೇಕ ಖಾತೆಗಳನ್ನು ನೀಡಬೇಕು ಹಾಗೂ ಖಾಸಗಿ ಸ್ವತ್ತುಗಳ ಅಸೆಸ್‌ಮೆಂಟ್ ಮಾಡಿಸಿ ದಾಖಲೆ ನಿರ್ವಹಿಸಬೇಕು.

**(4) <u>ತಾಂಡಾ/ವಾಲ್ಮೀಕಿ/ಅಂಬೇಡ್ಕರ್/ದೇವರಾಜ್‌ಅರಸ್ ಇತ್ಯಾದಿ ನಿಗಮಗಳು / ಜಿಲ್ಲಾ ಪಂಚಾಯಿತಿ /ಲೋಕೋಪಯೋಗಿ ಇಲಾಖೆ:</u>**

ಹೊಸದಾಗಿ ರಚನೆಗೊಂಡ ಕಂದಾಯ ಗ್ರಾಮಗಳನ್ನು ಸಾರ್ವಜನಿಕರು ಮತ್ತು ಸ್ಥಳೀಯ ಆಡಳಿತಗಳ ಗಮನಕ್ಕೆ ತರಲು ಹಾಗೂ ಹೊಸ ಗ್ರಾಮದ ಹೆಸರನ್ನು ಜನಪ್ರಿಯಗೊಳಿಸಲು ಅದು ತಾಂಡಾ ಆಗಿದ್ದಲ್ಲಿ ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದಿಂದ, ಹಟ್ಟಿ, ಹಾಡಿ, ಮಜರೆ ಇತ್ಯಾದಿಗಳಾಗಿದಲ್ಲಿ ಸಂಬಂಧಪಟ್ಟ ಅಭಿವೃದ್ಧಿ ನಿಗಮಗಳಿಂದ ಅಥವಾ ಸ್ಥಳೀಯ ಜಿಲ್ಲಾ ಪಂಚಾಯಿತಿಗಳಿಂದ ಗ್ರಾಮದ ನಾಮ ಫಲಕಗಳನ್ನು ಶಿಲಾ ರೂಪದಲ್ಲಿ ಮಾಡಿಸಿ ಹಾಕಿಸಬೇಕು.

...11

ಆ ವಸತಿ ಪ್ರದೇಶದಲ್ಲಿ ಸರ್ಕಾರಿ ಶಾಲೆ, ಆಸ್ಪತ್ರೆ, ಅಂಗನವಾಡಿ ಕೇಂದ್ರ ಇತ್ಯಾದಿ ಸಾರ್ವಜನಿಕ ಕಟ್ಟಡಗಳಿದ್ದಲ್ಲಿ ಅವುಗಳ ನಾಮ ಫಲಕಗಳಲ್ಲಿ ಆ ಗ್ರಾಮದ ಹೊಸ ಹೆಸರನ್ನು ಬರೆಸಲು ಲೋಕೋಪಯೋಗಿ ಇಲಾಖೆ ಅಥವಾ ಸಂಬಂಧಿತ ಇಲಾಖೆ ಕ್ರಮವಹಿಸಬೇಕು.

ಜಿಲ್ಲಾಧಿಕಾರಿಗಳು ಹೊಸ ಗ್ರಾಮ ರಚನೆಯ ಮಾಹಿತಿಯನ್ನು ಚುನಾವಣಾ ಆಯೋಗ, ಜನಗಣತಿ ನಿರ್ದೇಶನಾಲಯ ಮುಂತಾದ ಶಾಸನಬದ್ಧ ಪ್ರಾಧಿಕಾರಿಗಳಿಗೆ ಕಳಿಸಬೇಕು.

ಮೇಲ್ಕಂಡಂತಹ ದಾಖಲೆ ರಹಿತ ಜನವಸತಿ ಪ್ರದೇಶಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸುವಾಗ ಹಲವಾರು ರೀತಿಯ ಸವಾಲುಗಳು ಎದುರಾಗುತ್ತವೆ. ಸರ್ಕಾರಿ ಗೋಮಾಳಗಳಲ್ಲಿ, ಅರಣ್ಯ ಜಮೀನಿನಲ್ಲಿ, ಖಾಸಗಿ ಜಮೀನುಗಳಲ್ಲಿ, ಆ ವಸತಿ ಪ್ರದೇಶದಲ್ಲಿಯೇ ಇರುವ ಒಬ್ಬಿಬ್ಬರ ಖಾತೆಯ ಜಮೀನುಗಳಲ್ಲಿ ಇತರೆ ಸಂಘ ಸಂಸ್ಥೆಗಳು, ಸರ್ಕಾರಿ ಇಲಾಖೆಗಳು, ಖಾಸಗಿ ಮತ್ತು ಸಾರ್ವಜನಿಕ ಕಂಪನಿಗಳು, ಸ್ವಾಯತ್ತ ಸಂಸ್ಥೆ ಇತ್ಯಾದಿ ಸಂಸ್ಥೆಗಳ ಒಡೆತನದ ಜಮೀನುಗಳಲ್ಲಿ ತಲೆ ಎತ್ತಿರುವ ದಾಖಲೆ ರಹಿತ ಜನವಸತಿ ಪ್ರದೇಶಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸಲು ಯಾವ ಕ್ರಮ ಕೈಗೊಳ್ಳಬೇಕೆಂಬುದರ ಬಗ್ಗೆ ಶ್ರೀ ಕೆ. ನರಸಿಂಹಯ್ಯ ಸಮಿತಿಯ ವರದಿಯಲ್ಲಿ ವಿವರಗಳಿದ್ದು ಅವುಗಳನ್ನು ಅವಲೋಕಿಸುವುದು.

(ಸಿ.ಮುಟ್ಟನಂಜಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂಮಾಪನ)

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

| ಸಂಪುಟ –೧೫೬<br>Volume - 156 | ಬೆಂಗಳೂರು, ಗುರುವಾರ, ೦೨, ಸೆಪ್ಟೆಂಬರ್, ೨೦೨೧ (ಭಾದ್ರಪದ, ೧೧, ಶಕವರ್ಷ, ೧೯೪೩)<br>BENGALURU, THURSDAY, 02, SEPTEMBER, 2021 (BHADRAPADA, 11, SHAKAVARSHA, 1943) | ಸಂಚಿಕೆ ೧೩೭<br>Issue 137 |
|---|---|---|


## ಭಾಗ ೪ಎ

ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಆಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು

## GOVERNEMNT OF KARNATAKA

**RD 02 CCRV 2019**

Karnataka Government Secretariat
Multi Storied Building,
Bengaluru, Date:05-08-2021

### NOTIFICATION

The draft of the following rules further to amend the Karnataka Land Reforms Rules, 1974 was published as required by Sub section (1) of Section 137 read with section 38A of the Karnataka Land Reforms Act, 1961 (Karnataka Act 10 of 1962) in Notification No:RD 02 CCRV 2019 dated: 27/04/2021 published in Part IV-A of Karnataka Gazette dated:10-06-2021 inviting objections or suggestions from all the persons likely to be affected thereby, within fifteen days from the date of its publication in the Official Gazette.

Whereas the said Gazatte was made available to public on 10-06-2021. And whereas no objections and suggestions have been received by the State Government within the period specified above.

Now, therefore in exercise of the powers conferred by Section 137 read with Section 38A of the Karnataka Land Reforms Act, 1961. (Karnataka Act 10 of 1962) The Government of Karnataka here by makes the following rules namely:-

## RULES

1. **Title and Commencement:-** (1) These rules may be called the Karnataka Land Reforms (Amendment) Rules, 2020.

(2) They shall come into force from the date of the final publication in the Official Gazette.

2. **Substitution of Form 2-E:-** In the Karnataka Land Reforms Rules, 1974, for Form-2E and entries relating thereto the following shall be substituted, namely:-

3. "Form 2-E

[see sub-rulc (3) of rule 9-B]

Whereas, the Assistant Commissioner of ------------------------------sub division after conducting spot inspection has submitted a proposal for declaration of unrecorded habitation in respect of habitation situated ------------------------(mention address).

I the Deputy Commissioner of ------District, having examined the said proposal of the Assistant Commissioner and having satisfied that the same meets the criterion prescribed to declare the said -------------
unrecorded habitation as such, in exercise of the powers conferred under section 38A of the Karnataka Land Reforms Act, 1961, hereby declare the following areas as an unrecorded habitation, namely:-

| Nameof Taluk | Name of the unrecorded habitation and name of original village under which it falls | SurveyNo. | Total extent of land on which unrecorded habitation ......... is located (4) | | Boundaries | | | |
|---|---|---|---|---|---|---|---|---|
| | | | Acre | Guntas | North | South | East | West |
| (1) | (2) | (3) | (4)(i) | (4)(ii) | (5) | (6) | (7) | (8) |
| | | | | | | | | |

It is hereby declared that this unrecorded habitation may hereinafter be named as ..............................

And whereas in consequence of this declaration the extent of land indicated in the column (4) above with survey number specified in column (3) on which the said unrecorded habitation is located vests absolutely in the state Government free from all encumbrance.

**Provided that, any private land vested in the Government** as per this notification is subject to the condition that any extent of such land occupied by the land owner himself for his residential and other domestic purpose, if identified or included in it, the same shall be restored to him by the Assistant Commissioner at the time of identifying eligible claimants for issuing title deeds to the habitants of the said unrecorded habitation.

Place: "Deputy Commissioner"
Date:

By Order and in the name of
The Governor of Karnataka

(Dr.Rajendra Prasad.M.N.,)
Director,
Cell for Creation of Revenue Villages,
and Ex-Officio Deputy Secretary to Govt.
Revenue Department

**PR-244**

**GOVERNEMNT OF KARNATAKA**

RD 611 KAMGRARA 2017

Karnataka Government Secretariat
Multi Storied Building
Bengaluru, Date: 24-06-2021

**FINAL NOTIFICATION**

Whereas the draft of the Notification No RD 611 KAMGRARA 2017 Dated:10.08.2017 regarding altering the limits of **Hunasamaranahalli** village of Yelahanka Taluk and Banglore urban District and constituting a new revenue village called **Kodagalahatti** was published as required by section 6 of the Karnataka Land Revenue Act, 1964 (Karnataka act No.12 of 1964) in the Karanataka Gazette No. RD 611KAMGRARA dated 14-09-2017 inviting objections or suggestions from all the persons likely to be affected thereby within thirty days from the date of its publication in the Official Gazette.

And Where as, the said gazette was made available to the public on 04.06.2018

And whereas, objections and suggestions have been received and considered by the State Government;

Now, therefore, in exercise of the powers conferred by section 5 of Karnataka Land Revenue Act, 1964 (Karnataka act No.12 of 1964) the Government of Karnataka here by makes the following notification, namely:-

**SCHEDULE-I**

Land bearing survey numbers of the village and survey numbers of the areas specified in column (2) of the table below shall be excluded from the limits of said village of Yelahanka Taluk in Banglore urban District to form a new revenue village called as **Kodagalahatti** of Yelahanka Taluk Banglore urban District along with the survey numbers included in column (4) thereof.

**TABLE - 1**

| SL.No | Old Survey Numbers and Villages from Which areas are Excluded from Hunasamaranahalli | Extent of Areas Transferred to new village Kodagalahatti. | | Survey numbers Specified in column (2) which are to be included to form new Village Kodagalahatti & new Survey numbers assigned to them. |
|---|---|---|---|---|
| | | Acre | Gunte | |
| (1) | (2) | (3) | | (4) |
| 1 | 118 | 9 | 35 | 1 |
| 2 | 129 | 8 | 10 | 2 |
| 3 | 139 | 3 | 39 | 3 |
| 4 | 149 | 4 | 18 | 4 |
| 5 | 152 | 3 | 20 | 5 |
| 6 | 151 | 7 | 6 | 6 |
| 7 | 136 | 4 | 12 | 7 |
| 8 | 150 | 3 | 23 | 8 |
| 9 | 137 | 3 | 36 | 9 |
| 10 | 135 | 6 | 33 | 10 |
| 11 | 134 | 9 | 5 | 11 |
| 12 | 132 | 6 | 28 | 12 |
| 13 | 138 | 7 | 17 | 13 |
| 14 | 130 | 5 | 32 | 14 |
| 15 | 131 | 4 | 26 | 15 |
| 16 | 133 | 4 | 35 | 16 |